ಮುನ್ನುಡಿ

"ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥"

ಪ್ರಪಂಚದಲ್ಲಿ, ಅದರಲ್ಲೂ ಈ ನಮ್ಮ ಭರತಖಂಡದಲ್ಲಿ ಮಹಿಮಾನ್ವಿತ ದಿವ್ಯ ಕ್ಷೇತ್ರಗಳು ಅಸಂಖ್ಯಾತವಾಗಿದೆ. ಅವುಗಳಲ್ಲಿ ನಮ್ಮ ಕೂರ್ಮಗಿರಿಯೂ ಒಂದು ಪ್ರಸಿದ್ಧವಾದ ತೀರ್ಥಕ್ಷೇತ್ರ. ಈ ದಿವ್ಯಕ್ಷೇತ್ರದಲ್ಲಿ ಅನಾದಿಯಾಗಿ ನೆಲಸಿರುವ ಶ್ರೀ ಲಕ್ಷ್ಮೀ ಆದಿನಾರಾಯಣ ಸ್ವಾಮಿಯ ಲೀಲಾ ಪ್ರಭಾವಗಳನ್ನು ಸಹಸ್ರ ನಾಲಿಗೆಗಳಿಂದ ವಿವರಿಸಿದರೂ ಮುಗಿಯದು.

ಕೂರ್ಮಾಕೃತಿಯಲ್ಲಿ (ಅಮೆಯ ಆಕಾರ)ರುವ ಈ ಗಿರಿಯನ್ನು ಕೂರ್ಮಗಿರಿ ಎನ್ನುವುದರಲ್ಲಿ ಅತಿಶಯೋಕ್ತಿಯಾಗಲಾರದು. ಈ ಬೆಟ್ಟದಲ್ಲಿ, ಸಹಜ ಸಿದ್ಧವಾದ ಒಂದು ಗುಹೆ ಇದೆ. ಅದರಲ್ಲಿ ಮುಮ್ಮೂಲೆಯ ಆಕೃತಿಯಲ್ಲಿ, ಶ್ರೀ ಲಕ್ಷ್ಮೀ ಆದಿನಾರಾಯಣ ಸ್ವಾಮಿಯು ಶಿಲಾ ರೂಪದಲ್ಲಿ ಲೋಕಕಲ್ಯಾಣಕ್ಕಾಗಿ ಅವತರಿಸಿರುವುದು ಒಂದು ವಿಶೇಷ. ವಾಸ್ತವವಾಗಿಯೂ, ಇದೊಂದು ತಪೋಭೂಮಿ. ಈ ಕ್ಷೇತ್ರದಲ್ಲಿ, ಉಲ್ಲಾಸ, ಭಕ್ತಿ, ಸರಲತೆ, ನಿಶ್ಚಲತ್ವ ಶಾಂತತೆ ಇವೆಲ್ಲವುಗಳ ಅನುಭವ ಮನಸ್ಸಿಗೆ ಏಕಕಾಲದಲ್ಲಿ ಉಂಟಾಗುವಂತೆ ತಾಂಡವವಾಡುತ್ತಿರುತ್ತವೆ. ಇಲ್ಲಿಗೆ ಆಗಮಿಸುವ ಭಕ್ತರೆಲ್ಲರಿಗೂ ಇಂತಹ ಅನುಭವವೇ ಆಗುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಅನಾದಿ ಕಾಲದಿಂದಲೂ ವಿರಾಜಿಸುತ್ತಿರುವ ಈ ದಿವ್ಯ ಕ್ಷೇತ್ರವು ಪ್ರಕೃತ, ಕರ್ನಾಟಕ ಪ್ರದೇಶದ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನಲ್ಲಿದೆ. ಇದೇ ತಾಲ್ಲೂಕಿನ ಕೇಂದ್ರವಾದ ಗುಡಿಬಂಡೆ- ಎಂಬ ಪಟ್ಟಣದಲ್ಲಿ, ಕೀರ್ತಿಶೇಷರಾದ, ವೇ॥ ಬ್ರಂ॥ ಶ್ರೀ॥ ನರಸಿಂಹಭಟ್ಟರವರ ನಿಲಯದಲ್ಲಿ, ಪುರಾತನ

ಓಲೆಗರಿಯ ಪುಸ್ತಕವೊಂದು ಕೂರ್ಮಗಿರಿ ಮಹಾತ್ಮೆ ಎಂಬ ಹೆಸರಿನಲ್ಲಿದೆ. ಈ ಕ್ಷೇತ್ರ ಮಹಾತ್ಮೆಯನ್ನು ರಚಿಸುವಾಗ, ಆ ಗ್ರಂಥದ ಸಹಾಯವು ದೊರೆಯಿತು. ನಂತರ ಹಿಂದೂಪುರದ ಶ್ರೀ ಚಿನಹುಣತೂರು ರಾಮರಾಯರು-ರಚಿಸಿದ. "ಶ್ರೀ ಲಕ್ಷ್ಮೀ ಆದಿನಾರಾಯಣಸ್ವಾಮಿ ಚರಿತ್ರಮು"- ಎಂಬ ತೆಲುಗು ಪದ್ಯಕಾವ್ಯವನ್ನು ಆಮೂಲಾಗ್ರವಾಗಿ ಓದಿ ಸಹಾಯಪಡೆದುಕೊಂಡಿರುತ್ತೇನೆ. ಸಂಸ್ಕೃತಶ್ಲೋಕ ರೂಪದ ಆ ಕೂರ್ಮಗಿರಿ ಮಹತ್ವವು ಪದ್ಮಪುರಾಣಾಂತರ್ಗತ ವೆಂದು, ಆ ಓಲೆಗರಿಯ ಪ್ರತಿಯಲ್ಲಿ ಉಲ್ಲೇಖವಿದೆ. ಅದರ ಆಧಾರದಲ್ಲಿಯೆ ಶ್ರೀಯುತ ರಾಮರಾಯರು ಆಂಧ್ರ ಭಾಷೆಯಲ್ಲಿ ಶ್ರೀ ಆದಿನಾರಾಯಣಸ್ವಾಮಿಯ ಚರಿತ್ರೆಯನ್ನು ಪದ್ಯರೂಪದಲ್ಲಿ ಬರೆದಿರುವರೆಂದು ತಾವೇ ಹೇಳಿ ಬರೆದಿರುತ್ತಾರೆ. ಸಂಸ್ಕೃತ ಭಾಷೆಯನ್ನು ಎಲ್ಲರೂ ಅರಿಯರು, ತೆಲುಗು ಭಾಷೆಯ ಪದ್ಯಗಳನ್ನೇ ಓದಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವೂ ಸಾಮಾನ್ಯರಿಗೆ ಸಾಧ್ಯವಾಗುವುದಿಲ್ಲ. ಹೀಗೆಂಬ ಭಾವನೆಯಿಂದಲೇ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿ ಚರಿತ್ರೆ ಅಥವಾ ಕೂರ್ಮಗಿರಿ ಮಹಾತ್ಮೆ- ಎಂಬ ಹೆಸರಿನಲ್ಲಿ, ಈ ಚಿಕ್ಕ ಪುಸ್ತಕವನ್ನು ರಚಿಸಲು ಸಂಧರ್ಭವೊದಗಿತು.

ಈ ಸ್ವಾಮಿಯ ದಿವ್ಯಕ್ಷೇತ್ರದಲ್ಲಿಯೇ ವಾಸಿಸುತ್ತ ಈ ಕ್ಷೇತ್ರ ಪ್ರಸಿದ್ಧಿಗೆ ಹೇಗೆ ಶ್ರಮಿಸಲಿ, ಎಂದ ಯೋಚಿಸುತ್ತಿರುವಾಗ ಶ್ರೀ ಆದಿನಾರಾಯಣ ಸ್ವಾಮಿಯ, ಪ್ರೇರಣೆಯಿಂದಲೇ ಈ ಚರಿತ್ರೆ ರಚನೆಗೆ ಪ್ರಯತ್ನಿಸಿದೆ. ಇದನ್ನು ಬರೆಯುವಾಗ, ಈ ಕಥಾವಸ್ತು, ನನ್ನ ಚಕ್ಷುಗಳಿಗೆ, ಪರದೆಯ ಮೇಲಿನ ಚಿತ್ರಗಳಂತೆ ಗೋಚರವಾಗುತ್ತಿತ್ತು. ಸಾಕ್ಷಾತ್ ಪರಮಾತ್ಮನಾದ, ಶ್ರೀ ಆದಿನಾರಾಯಣಸ್ವಾಮಿಯ, ಕೃಪೆಯನ್ನಾಗಲಿ, ಮಹಿಮೆಯನ್ನಾಗಲಿ, ದಿವ್ಯ ಕಥೆಯನ್ನಾಗಲಿ, ವರ್ಣಿಸಲು, ಬರೆಯಲು, ನಾನೆಷ್ಟರವನು, ಆ ಪರಮಾತ್ಮನ ನಿರ್ವ್ಯಾಜ ಕೃಪೆಯೇ ಈ ಕೃತಿಯ ರಚನೆಗೆ ಕಾರಣ.

ಈ ಚರಿತ್ರೆಯನ್ನು ಬರೆಯುವಾಗ, ಕೆಲವು ನಿದರ್ಶನಗಳನ್ನೂ ತೋರಿಸಿ ತಿಳಿಸಿದ ಎಲ್ಲೋಡುಗ್ರಾಮಸ್ಥರಿಗೆ ನಾನು ಬಹುಕೃತಜ್ಞನಾಗಿದ್ದೇನೆ.

ಈ ಮುದ್ರಣವನ್ನು ಬೆಂಗಳೂರು ನಗರದಲ್ಲಿರುವ ಶ್ರೀ ಪಿ.ಕೆ.ವಾಸುದೇವನ್ ಅವರು ಅತ್ಯಾದರದಿಂದ ಮಾಡಿಸುತ್ತಿದ್ದಾರೆ. ಅವರಿಗೂ, ಅವರ ಕುಟುಂಬ ವರ್ಗದವರಿಗೂ ಶ್ರೀ ಲಕ್ಷ್ಮೀ ಆದಿನಾರಾಯಣ ಸ್ವಾಮಿಯು ಆಯುರಾರೋಗ್ಯಾದಿ ಸಕಲೈಶ್ವರ್ಯಗಳನ್ನೂ ಕುರುಪಸಲೆಂದು ಪ್ರಾರ್ಥಿಸುತ್ತೇನೆ.

(ಶ್ರೀ ಕೂರ್ಮಗಿರಿ ಕ್ಷೇತ್ರ) ಇತಿ

ಶ್ರೀ ಆದಿನಾರಾಯಣಸ್ವಾಮಿ ಬೆಟ್ಟ ರಚಯಿತ

(ಎಲ್ಲೋಡು) ಮಂಕಾಲ ಲಕ್ಷ್ಮೀನೃಸಿಂಹಕರ್ಮ

ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿ ದಿವ್ಯಚರಿತ್ರೆ

ಮುನ್ನುಡಿ

ಶ್ರೀ ಲಕ್ಷ್ಮೀಅದಿನಾಯರಾಯಣಸ್ವಾಮಿ ದಿವ್ಯಚರಿತ್ರೆಯನ್ನು ತೆಲುಗು ಭಾಷೆಯಲ್ಲಿ ತೆಲುಗು, ಸಂಸ್ಕೃತ ವಿದ್ವಾನ್ ವೇ॥ ಬ್ರ॥ ಶ್ರೀ॥ ದಿ॥ ಮಂಕಾಲಲಕ್ಷ್ಮೀನರಸಿಂಹಶರ್ಮ ಅವರು ರಚಿಸಿರುವರು ಈ ಚರಿತ್ರೆಯನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡ, ಸಂಸ್ಕೃತ, ವಿದ್ವಾನ್ ವೇ॥ ಬ್ರ॥ ಶ್ರೀ॥ ದಿ॥ ಮಂಕಾಲ ಆದಿನಾರಾಯಣಶರ್ಮಾರವರು ರಚಿಸಿದ ಈ ಪುಸ್ತಕವನ್ನು ಶ್ರೀಮತಿ ಶ್ರೀ ವಿ.ಕೆ ವಾಸುದೇವನ್, ಸಂಜಯನಗರ ಇವರು ಭಗವತ್ ಕೃಪೆಯಿಂದ ದ್ವಿತೀಯ ಮುದ್ರಣವನ್ನಾಗಿ ಅತಿ ಸುಂದರವಾಗಿ ಮಾಡಿಸಲು ಇಚ್ಛಿಸಿರುತ್ತಾರೆ. ಆದ್ದರಿಂದ ಅವರು ಐದು ದಿನಗಳ ಕಾಲ ಸಾಮವೇದವನ್ನು ಶ್ರೀಕೂರ್ಮಗಿರಿ ಕ್ಷೇತ್ರದ ಪಾರಾಯಣಮಾಡಿ, ದೇವರ ಅನುಗ್ರಹವನ್ನು ಪಡೆದು ಅವರ ತಂದೆ–ತಾಯಿಯ ಆಶೀರ್ವಾದದಿಂದ ಭಗವತ್ ಪ್ರೇರಣೆಯನ್ನು ಪಡೆದಿದ್ದಾರೆ. ಇದೇ ಚರಿತ್ರೆ ಸಂಬಂಧಪಟ್ಟ ದಿ॥ ವೇ॥ ಬ್ರ॥ ಶ್ರೀ॥ ಮಂಕಾಲ ಲಕ್ಷ್ಮೀನರಸಿಂಹಶರ್ಮರವ ಮೊಮ್ಮಗನಾದ ಭಾಗವತ ಪ್ರವಚನ ಕರ್ತರು ವೇ॥ಬ್ರ॥ಶ್ರೀ॥ಮಂಕಾಲ ಶ್ರೀಹ ಶರ್ಮರವರು ಈ ಪುಸ್ತಕವನ್ನು ಅನುಮೋದಿಸಿ ತಪ್ಪುಗಳನ್ನು ಸರಿಪಡಿಸಿ ಮುದ್ರ ಅನುಮತಿಯನ್ನುಕೊಟ್ಟು ಸಹಕರಿಸಿದ್ದಾರೆ.

ಇಂತಿ

ಮಂಕಾಲ–ಜ್ವಾಲ ಪ್ರಸಾದ್‌ಶ

ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿನೇ ನಮಃ

ಅನುವಾದಕನ ನುಡಿ

"ಶ್ರೀ ಕೂರ್ಮಗಿರಿ ಮಹಾತ್ಮೆಯನ್ನು" ತಿಳಗನ್ನಡ ಭಾಷೆಗೆ ಅನುವಾದ ಮಾಡುವಾಗ, ಒಂದು ವಿಷಯವನ್ನು ಹೇಳಬೇಕು. ಶ್ರೀ ಕೂರ್ಮಗಿರಿ ಮಹಾತ್ಮೆ ಅಥವಾ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಚರಿತ್ರೆ" ಎಂಬ ಈ ಪುಟ್ಟ ಗ್ರಂಥವನ್ನು ನನ್ನ ತಮ್ಮ ಪಂಡಿತ, ಶ್ರೀಮಂಕಾಲ ಲಕ್ಷ್ಮೀನರಸಿಂಹ ಶರ್ಮರು ತೆಲುಗು ಭಾಷೆಯಲ್ಲಿ ರಚಿಸಿದ್ದಾರೆ. ಶ್ರೀಯುತರು ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ಈ ಗ್ರಂಥ ರಚನಾಕಾರ್ಯ ಸಾಕ್ಷಾತ್ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿ ಕೃಪೆಯಿಂದಲೇ ನೆರವೇರಿತೆಂದಾಗ, ಆ ಗ್ರಂಥವನ್ನು ಬೇರೊಂದು ಭಾಷೆಯಲ್ಲಿ ಅನುವಾದ ಮಾಡುವುದು ಎಷ್ಟು ಪ್ರಯಾಸದಾಯಕವೆಂಬುದನ್ನು ಸ್ವಾಮಿಯ ಕೃಪೆಯಿಂದಲೇ ಸಾಧ್ಯವೆಂಬುದನ್ನೂ ವಾಚಕರು ತಿಳಿಯಬೇಕು. ಈ ತೆಲುಗು ಮೂಲದ ಭಾಷೆಯು ಅತಿ ಸರಳವಾಗಿಯೂ ಸಾಹಿತ್ಯಕವಾಗಿಯೂ, ಜನಜನಿತವಾಗಿಯೂ ಇದೆ. ಆ ಭಾಷಾ ಮರ್ಯಾದೆ, ವಾಕ್ಯಾಂಶಗಳು ಎಷ್ಟೇ ಪರಿಚಯವಿದ್ದರೂ, ಲೇಖಕರ ಭಾವನೆಗಳೂ ಅಭಿಪ್ರಾಯಗಳಿಗೆ ವಿರೋಧ ಬಾರದಂತೆ, ಈ ಭಾಷಾ ಮರ್ಯಾದೆ ವಾಕ್ಯಾಂಶಗಳು, ಲೋಕೋಕ್ತಿಗಳೂ, ಯುಕ್ತವಾದ ಪದಪ್ರಯೋಗಗಳೂ ಇವುಗಳನ್ನು ಅಳವಡಿಸಿಕೊಂಡು ಅನುವಾದ ಮಾಡುವುದು ಎಷ್ಟು ಶ್ರಮ ಸಾಧ್ಯವೆಂಬುದು, ಸಹೃದಯ ಸಾಹಿತಿಗಳಿಗೆ ತಿಳಿಯದ ವಿಷಯವೇನಲ್ಲ.

ಈ ಕನ್ನಡ ಭಾಷೆಯ ಅನುವಾದದಲ್ಲಿ ಮೂಲ ಲೇಖಕರ ಅಭಿಪ್ರಾಯ ಕೆಡಗೊಡದೆ, ಭಾಷಾ ಮರ್ಯಾದೆಯನ್ನು ರಕ್ಷಿಸಿಕೊಂಡು ಬಂದಿದ್ದೇನೆಂದು ಧೈರ್ಯವಾಗಿ ಹೇಳಬಲ್ಲೆ. ಅನುವಾದ ಮಾಡುವಾಗ ಮೂಲ ವಾಕ್ಯಾಂಶಗಳನ್ನೂ ಮೂಲ ಪದಗಳನ್ನೂ ಬಿಡದೆ ಕೆಲ ವಾಕ್ಯಾಂಶಗಳನ್ನೂ ಪದಗಳನ್ನೂ ಉಪಯೋಗಿಸಿ ಭಾವಾನುವಾದ ಮಾಡಿದ್ದೇನೆ.

ಶ್ರೀ ಲಕ್ಷ್ಮೀಅವಿಣಾಶಿರಾಯಣ ಸ್ವಾಮಿಯ ಕೃಪೆಯೀ ಈ ಕಾರ್ಯವು ಸರಾಗವಾಗಿ ನಡೆಯಿತು. ಶ್ರೀ ಸ್ವಾಮಿಗೆ ನತಶಿರಸ್ಸುಳಾಗಿ ನಮಸ್ಕರಿಸುತ್ತೇನೆ. ಅವನ ಕೃಪೆ ಸದಾ ನನ್ನ ಮೇಲಿರಲಿ ಎಂದು ಪ್ರಾರ್ಥಿಸುತ್ತೇನೆ.

ಮೂಲ ಲೇಖಕರಾದ ನನ್ನ ತಮ್ಮ ವಿರಂಚೀಪುರಂ ಪಂಡಿತ ಶ್ರೀ ಲಕ್ಷ್ಮಣಾಚಾರ್ಯರು ಇದನ್ನು ಕನ್ನಡಕ್ಕೆ ಅನುವಾದ ಮಾಡಲು ನನಗೆ ಹೇಳಿದರು. ಅವರಿಗೆ ನನ್ನ ಮೇಲಿರುವ ಸಹೃದಯತೆ ಪರಮಾತ್ಮನು ಆ ಸಾಮರ್ಥ್ಯವನ್ನು ನನಗೆ ಕೊಡುತ್ತಾನೆಂಬುದು ಅತನ ದೃಢನಂಬಿಕೆ. ಅನ್ಯಥಾ ಈ ಕಾರ್ಯವು ನನ್ನಿಂದ ಸಾಗುವುದೆಂತು?

ಶ್ರೀ ಕಂಚಿ ಸಮುದ್ರಂ. ಟಿ.ವಿ. ಗೋವಿಂದಯ್ಯನವರು ಈ ಅನುವಾದದ ಕೆಲವು ಭಾಗಗಳನ್ನು ನನ್ನಿಂದಲೇ ಓದಿಸಿ, ಸಂತೋಷಿಸಿದರು. ಅದರ ಫಲವೇ ಇದರ ಮುದ್ರಣ ಕಾರ್ಯವು ಕೈಗೂಡಿರುವುದು. ವೈಶ್ಯಕುಲ ತಿಲಕರು, ಧರ್ಮಾಗ್ರಣಿಗಳೂ ಆದ ಶ್ರೀಯುತ ಗೋವಿಂದಯ್ಯನವರ ಔದಾರ್ಯ ಧೈರ್ಯ, ಭಕ್ತಿ ಪಾರವಶ್ಯತೆ, ವಿನಯ, ಸೌಶೀಲ್ಯಾದಿಗಳು ಅನುಕರಣೀಯವಾದವು. ಶ್ರೀಯುತರು ತಮ್ಮ ಈ ವಯಸ್ಸಿನಲ್ಲಿಯೂ "ಆರ್ಯವೈಶ್ಯ ಸಂಕಟಹರಣ ಸಭೆ"ಯ ಮೂಲಕ, ಶ್ರೀ ಕೂರ್ಮಗಿರಿಯ, ಶ್ರೀ ಕೂರ್ಮ ಗಿರೀಶನ ಸೇವೆಗಾಗಿ, ಅಲ್ಲಿಗೆ ಆಗಮಿಸುವ ಭಕ್ತಯಾತ್ರಾರ್ಥಿಗಳ ಅನುಕೂಲಕ್ಕಾಗಿ ದುಡಿಯುತ್ತಿರುವುದೇ ಸಾಕ್ಷಿ.

ಶ್ರೀಯುತರ ಅನುಜರೊಬ್ಬರಾದ ಶ್ರೀಟಿ.ವಿ. ಶ್ರೀರಾಮಯ್ಯ ಗುಪ್ತರವರು ತಮ್ಮ ಅಗ್ರಜರಾದ ಶ್ರೀ ಟಿ.ವಿ. ಗೋವಿಂದಯ್ಯನವರ ಉದ್ದೇಶವನ್ನೇ ತಮ್ಮ ಜೀವನಾದರ್ಶವನ್ನಾಗಿಯೂ, ಅದರಿಂದಲೇ ತಮ್ಮ ಜನ್ಮ ಸಾರ್ಥಕವನ್ನಾಗಿಯೂ ತಿಳಿದು, ಶ್ರೀ ಕೂರ್ಮಗಿರೀಂದ್ರನಾದ ಶ್ರೀ ಲಕ್ಷ್ಮೀಅವಿಣಾಶಿರಾಯಣ ಸ್ವಾಮಿಯ ಸೇವಾಕಾರ್ಯದಲ್ಲಿ ಬದ್ಧಕಂಕಣರಾಗಿದ್ದಾರೆ.

ಕನ್ನಡ. ಈ ಕನ್ನಡ ಭಾಷೆಯ ಅನುವಾದದ ದಿವ್ಯ ಪ್ರಕರಣದ ಮುದ್ರಣದ ಸಂಪೂರ್ಣ ವೆಚ್ಚವನ್ನು ಶ್ರೀಯುತ ಶ್ರೀ ವಿ.ಕೆ.ವಾಸುದೇವನ್ ಅವರು ತಾವೇ ವಹಿಸಿಕೊಂಡು ದೇವರ ಸೇವಾ ಭಾಗ್ಯಕ್ಕೆ ಸಂಪೂರ್ಣ ಭಾಗಿಯಾಗಿದ್ದಾರೆ.

ಇದೇ ಬೆಂಗಳೂರಿನಲ್ಲಿ ವಾಸವಾಗಿರುವ ಮತ್ತು ಶ್ರೀಮತಿ ಶ್ರೀ

ವಿ.ಕೆ.ವಾಸುದೇವನ್ ಅವರಿಗೂ ಶ್ರೀಯುತರ ಪುತ್ರ-ಪೌತ್ರಾದಿಗಳಿಗೂ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯವರು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ನೀಡಿ ಸದಾ ಸಂರಕ್ಷಿಸಲಿ ಎಂದು ಭಗವಂತನಲ್ಲಿ ನನ್ನ ಪ್ರಾರ್ಥನೆ.

-ಸಂ

ವೇ॥ಬ್ರ॥ತ್ರೀ॥ಪಂ॥ ಮಂಕಾಲ ಆದಿನಾರಾಯಣಶರ್ಮ
ಹಿಂದಿ, ಸಂಸ್ಕೃತ, ಕನ್ನಡ ಸಾಹಿತ್ಯ ವಿಶಾರದ
ಸಂಸ್ಕೃತ ಸಾಹಿತ್ಯ ರತ್ನ
ಬಸವೇಶ್ವರನಗರ.

1

ಓಂ ನಮೋಭಗವತೇ ವಾಸುದೇವಾಯ
ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿ ಚರಿತ್ರೆ
(ಶ್ರೀ ಕೂರ್ಮಗಿರಿ ಕ್ಷೇತ್ರ ಮಹಾತ್ಮೆ)

ಯೋಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತ್ಯಖಿಲ ಶಕ್ತಿಧರಃ ಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತ ಚರಣ ಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯತಸ್ಮೈ ॥

ಪೂರ್ವಕಾಲದಲ್ಲಿ ಶ್ರೀ ಕೃಷ್ಣರಾಜೇಂದ್ರಾದಿ ಪ್ರಮುಖ ರಾಜಸ್ಯರಿಂದ ಪರಿಪಾಲಿಸಲ್ಪಟ್ಟ ಸ್ವಾತಂತ್ರ್ಯಪ್ರಾಪ್ತಿಯ ಅನಂತರ ಕರ್ನಾಟಕ ದೇಶವೆಂದು ವ್ಯವಹಾರದಲ್ಲಿರುವ ಪ್ರದೇಶದಲ್ಲಿ ಕೋಲಾರ ಜಿಲ್ಲೆಗೆ ಸೇರಿದ ಗುಡಿಬಂಡೆ ತಾಲ್ಲೂಕಿಗೆ ಗುಡಿಬಂಡೆಯೇ ಕೇಂದ್ರ. ಆವೂರಿಗೆ ಏಳು ಮೈಲಿಗಳ ದೂರದಲ್ಲಿ, ಈ ತಾಲ್ಲೂಕಿಗೆ ಸೇರಿದ ಒಂದು ಸಣ್ಣ ಗ್ರಾಮ ಎಲ್ಲೋಡು. ಈ ಗ್ರಾಮಕ್ಕೆ ಪೂರ್ವ ದಿಕ್ಕಿನಲ್ಲಿ ಸುಮಾರು ಒಂದು ಮೈಲಿ ದೂರದಲ್ಲಿ, "ಕೂರ್ಮಗಿರಿ"ಎಂಬ ಪ್ರಕೃತಿ ಸುಂದರವಾದ ಬೆಟ್ಟವಿದೆ. ಇದನ್ನೇ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿ ಬೆಟ್ಟವೆಂದು ಕರೆಯುತ್ತಾರೆ.

ಕೂರ್ಮಗಿರಿ ವೃಷಭಗಿರಿ, ಧೇನುಗಿರಿ, ಸುರಸದ್ಮಗಿರಿ ಮತ್ತು ವಿದ್ಯಾಗಿರಿ ಎಂಬ ಪಂಚ ಗಿರಿಗಳಲ್ಲಿ ಕೂರ್ಮಗಿರಿಯು ಪ್ರಸಿದ್ಧವಾದುದು. ಕೂರ್ಮಗಿರಿಗೆ ಸಮೀಪದಲ್ಲಿಯೇ ಈ ನಾಲ್ಕು ಗಿರಿಗಳೂ ಇವೆ. ವೃಷಭಗಿರಿ ಎಂಬುದು ನಂದಿಬೆಟ್ಟ ನಂದಿ ಬೆಟ್ಟವೆಂದು ಪ್ರಸಿದ್ಧವಾದ ವೃಷಭಗಿರಿಯು ಈ ಕೂರ್ಮಗಿರಿಗೆ ದಕ್ಷಿಣದಲ್ಲಿ ಇಪ್ಪತ್ತೆರಡು ಮೈಲಿ ದೂರದಲ್ಲಿದೆ. ಧೇನುಗಿರಿಯನ್ನು "ಅವುಲ ಕೊಂಡ" ಎನ್ನುತ್ತಾರೆ. ಇದೂ ಸಹ ಕೂರ್ಮಗಿರಿಗೆ ದಕ್ಷಿಣದಲ್ಲಿಯೇ ಹದಿನಾಲ್ಕು ಮೈಲಿ ದೂರದಲ್ಲಿದೆ. ಸುರಸದ್ಮ ಗಿರಿಯೆ ಗುಡಿಬಂಡೆ ಬೆಟ್ಟ, ಇದು ಕೂರ್ಮಗಿರಿಗೆ, ಏಳು ಮೈಲಿ ದೂರದಲ್ಲಿಯೇ ಇದೆ. ವಿದ್ಯಾಗಿರಿಯನ್ನು ಪ್ರಕೃತ "ಚದುಮು ಕೊಂಡ" ಎನ್ನುತ್ತಾರೆ.

ಕೂರ್ಮಗಿರಿಗೆ ವಿಷ್ಣುಗಿರಿಯೆಂಬ ಎಂಬು ಮೊದಲು ಬಂದಿರಬೇಕು. ಕೂರ್ಮಗಿರಿಯ ಶ್ರೀ ಲಕ್ಷ್ಮೀ ಅವಿಷಾಠಾಂಡೇಶ್ವಾಮಿ ಸ್ವಾಮಿ ದೇವಿ ಕೂರ್ಮಗಿರಿಗೆ ಈ ಹೆಸರು ಬಿದ್ದಿರಲು ಸ್ವಲ್ಪ ಹಿನ್ನೆಲೆ ಕಡಿದು ದಕ್ಷಿಣ ಭಾಗದಲ್ಲಿರುವ ವಿಷ್ಣುಗಿರಿಯೇ ವಿಷ್ಣುಗಿರಿಯಾಗಿ ಮಾರ್ಪಟ್ಟಿರಬಹುದು. ವಿಷ್ಣುಗಿರಿಯಾಗಿದ್ದು ಹೊರತು ಉಳಿದ ಹೆಚ್ಚಿನ ಗಿರಿಗಳು ಕ್ರಮೇಣ ಕ್ಷೇತ್ರಗಳಾಗಿರುವ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಪೌಷ್ಣ ಗಿರಿಯು ಸುರ ಸದ್ಮಗಿರಿಯು ಶಿವಕ್ಷೇತ್ರಗಳಾಗಿರುವ ಬಗ್ಗೆ ಮಾಹಿತಿ ಇದ್ದರೂ ಮುಖ್ಯ ಕೂರ್ಮಗಿರಿಗಳು ವಿಷ್ಣು ಕ್ಷೇತ್ರಗಳಾಗಿರುವ ಪ್ರಮಾಣ ಹೆಚ್ಚಾಗಿದೆ. ಕೂರ್ಮಗಿರಿಯ ಶಿವಿರವನ್ನೇರಿ ನೋಡಿದರೆ, ಗುಡಿಗೋಪುರಗಳನ್ನು ವಿಷ್ಣುಗಿರಿಯು ದಿವ್ಯಕ್ಷೇತ್ರಗಳಾಗಿ ರಾರಾಜಿಸುತ್ತಿರುವ ಈ ಚತುರ್ಭಾಗದ ವಿಷ್ಣು ಸಾನ್ನಿಧ್ಯ ಎಂಬುದಕ್ಕೆ ಈ ಚತುರ್ಭಾಗದ ಪಂಕ್ತಿಯಲ್ಲಿಲ್ಲದೆ ಸ್ವಲ್ಪ ದಕ್ಷಿಣ ಬದಿಗಿರುವ ಗೋಪುರವನ್ನು ಗಮನಿಸಬಹುದು.

ನಂದಿ ಬೆಟ್ಟದ ಮೇಲೆ ಯೋಗ ನಂದೀಶ್ವರಾಲಯವೂ ಬೆಟ್ಟದ ತಪ್ಪಲಲ್ಲಿ ಭೋಗನಂದೀಶ್ವರಾಲಯವೂ ಇದೆ. ಭೋಗನಂದಿ ಎಂಬ ಅವುಲ ಕೊಂಡದಲ್ಲಿ ಶ್ರೀ ಲಕ್ಷ್ಮೀ ಸ್ವಯಂಭುಸ್ವಾಮಿಯು ನೆಲೆಸಿದ್ದಾರೆ. ಸುರಸದ್ಮಗಿರಿಯೆಂಬ ಗುಡಿಬಂಡೆ ಬೆಟ್ಟದಲ್ಲಿ ಅಗಸ್ತ್ಯ ಮಹಾಮುನಿಯಿಂದ ಪ್ರತಿಷ್ಠಿತವಾದ ಪ್ರಸನ್ನ ಪಾರ್ವತೀ ಸಮೇತ ರಾಮೇಶ್ವರಾಲಯವಿದೆ ಈ ನಂದಗಳ ಉತ್ತರದಲ್ಲಿ ಕೂರ್ಮಗಿರಿಯ ಮೇಲೆ ಬಂಡೆಗಳಲ್ಲಿಯೇ ಪ್ರಕೃತಿ ಸಿದ್ಧವಾದ ಚಕ್ರಾಕೃತಿಯಲ್ಲಿ ಶ್ರೀ ಲಕ್ಷ್ಮೀ ಅವಿಷಾಠಾಂಡೇಶ್ವಾಮಿ ಸ್ವಾಮಿಯು, ಹಾಗೂ ಅದೇ ಶಿಲಾ ಮೂರ್ತಿಯಾಗಿ ಉದ್ಭವಿಸಿ ಭಕ್ತರ ಮನೋಕಾಮನೆಗಳನ್ನು ಸಫಲಗೊಳಿಸುತ್ತಾ ಬಹುವೈಭವದಿಂದ ಶೋಭಿಸುತ್ತಿರುವುದು, ವಿಶೇಷವಿದೆ.

ವಿಷ್ಣುವಿನು ಇಂತಹ ಕ್ಷೇತ್ರವಾಗಿದ್ದರೂ, ಅಲ್ಲಿ ಬಂದು ಪೂಜಿಸಲು ಅಲ್ಲಿ ನಿಂದಿರಬೇಕಾದ ಗುಹೆಯಲ್ಲಿ ಪ್ರವೇಶಿಸಿ ಸ್ವಲ್ಪ ಕಾಲ ತಪಸ್ಸು ಧ್ಯಾನದಲ್ಲಿ ಮಗ್ನವಾದರೆ ಪುಣ್ಯವಾದುದು ಕೇಳಬೇಕೆಂದು ಹೇಳಬೇಕಿಲ್ಲ. ಕೆಲವರು ಪರೀಕ್ಷಿಸಿ ಆ ಪುಣ್ಯ ಸಾಧನವನ್ನು ಕ್ರಮಿಸಿ ಆನಂದಿಸಿದವರೂ ಇದ್ದಾರೆಂದು ಪ್ರತೀತಿ ಇದೆ.

"ಯದಾ ಯದಾಹಿ ಧರ್ಮಸ್ಯಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ"

೩

ಮಂದರಾಚಲದಲ್ಲಿ ಸಂಜೀವನಿ ಪರ್ವತವು ಪ್ರಾಪ್ತವಾಗುವಂತೆ ಮಾಡಿದ ಶ್ರೀಹರಿಯು ಮಂದರಪರ್ವತವನ್ನು ಕ್ಷೀರಸಮುದ್ರದಲ್ಲಿ ಸ್ಥಾಪಿಸಿದನು. ಸರಿಯಾದ ಸಾಧನ, ಸಂಪತ್ತುಗಳು ಮತ್ತು ಅಗತ್ಯವಾದ ಮಾರ್ಗದರ್ಶನ ಅನಂತರವಾಯಿತು. ಸ್ವರ್ಗದ, ದೇವತೆಗಳ ಬೆಟ್ಟವು ಸಮುದ್ರ ಎನ್ನುವಷ್ಟರಲ್ಲಿಯೇ ಅದೇಕವಾಯಿತು, ಅಮೃತ ಸಿಗಬೇಕು ಸರಿ ಆದರೆ ಅದಕ್ಕಿಂತ ಅದೇ ಮಾತಿನ ಬಹಳ ಮುಖ್ಯವಾದ ಸಮಸ್ಯೆಗಳು ಮೇಲೆ ಮೇಲೆ ಬರುತ್ತಿದ್ದವು. ದಾಹವಾದ ಜೀವ, ಸ್ವಾರ್ಥ ಭಾವಗಳು, ಮಾತ್ಸರ್ಯಗಳು ಹೀಗಾಯಿತು ದೇವದಾನವರಲ್ಲಿದ್ದವು. ವ್ಯಾಕ್ಷಗಳು, ಬಡಿತಗಳು, ಹಾಲಾಗಳು, ಮೊಸಳೆಗಳು, ಸ್ವರ್ಪಗಳು ಇತ್ಯಾದಿ ಅನೇಕ ಪ್ರಾಣಿಗಳು, ಹಗಲಿಲ್ಲದೇ ನಿದ್ರೆಯಿಲ್ಲದೆ ಸಂಚರಿಸುತ್ತಿದ್ದವು. ಈ ಸಂದಿ ಮೀರಲಾಗದೆ ಒಂದು ಬಲಶಾಲಿಯಾದ ಪರ್ವತವೂ, ಪ್ರಕೃತಿಯೂ, ಪರಿಸರವೂ ಅಲ್ಲಿ ಪರಮ ಸಾಧನೆಯಂತಾದ ಮಾಡಿಕೊಂಡಿದ್ದವು. ಪರಿಸರವೂ ಆದ ಈ ಕೂರ್ಮಗಿರಿ ಪ್ರಾಂತದ ಮಹಾಧರನ್ನು ಪ್ರಕೃತಿ ಸೌಂದರ್ಯಕ್ಕೆ ಆಕರವಾಗಿದೆ.

ಈ ಕೂರ್ಮಗಿರಿಯಲ್ಲಿ ಕದಂ ಪ್ರಭಾವ ಸಂಪನ್ನತೆಯಿಂದ ತೇಜಸ್ವಿಯೂ ಬ್ರಹ್ಮಜ್ಞಾನ ನಿಧಿಯೂ ಆದ ಕೂರ್ಮ ಮಹಾಮುನಿಯು ತಪೋನಿರತರಾಗಿ ಸಮಾಧಿ ಮಗ್ನರಾಗಿದ್ದರು. ಅವರ ನೀಳವಾದ ಕೇಶರಾಶಿಯು ಜಡೆ ಗಟ್ಟಿದ್ದು. ಕೌಪೀನ ಧಾರಿಯಾದ ಅವರ ಸುಂದರದಲ್ಲಿ ತಮಂಡಲು, ಯೋಗದಂಡಗಳೂ ವಿರಾಜಿಸುತ್ತಿದ್ದವು. ಅವರ ವಿಭೂತಿಯು ತ್ರಿಪುಂಡ್ರಗಳಿಂದ ಅಂಕಿತವಾದ ವಿಶಾಲವಾದ ಹಣೆಯು, ದಪ್ಪವಾದ ರುದ್ರಾಕ್ಷಿಗಳ ಮಾಲೆಗಳಿಂದ ಕೂಡಿದ ಕಂಠವು. ಅವರ ಧನ್ಯತೆಯನ್ನು ದ್ಯೋತಿಸುತ್ತಿದ್ದವು. "ಧೃವಧಕ್ಕೆ ರಾಜರೂ, ಸೋಮವಂಶಗಳೂ ಆಗಿ ಮುಂದಾಂಧರಾದ ಈ ಪ್ರಪಂಚಕ್ಕೆ ಬಾಡೊಂಡಿಗೆ ಬರುವಂತೆ ಸಾಧನೆ ಪ್ರಯೋಜನ" ಎಂಬಂತೆ ವಿಶಾಲವಾಗಿ, ಮೌನ ಧರಿಸಿದ್ದರು. ಅವರು ಯೋಗಿಯೂ, ತ್ಯಾಗಿಯೂ, ನಿಷ್ಕಾಮಿಯೂ ಆಗಿದ್ದರು. ಹಸಿವು ದಾಹಗಳಿಂಗಳನ್ನು ನಿರ್ಲಕ್ಷಿಸಿದ್ದರು. ಬಿಸಿಲು-ಚಳಿಗಳಿಗೂ, ಮಳೆ-ಗಾಳಿಗಳಿಗೂ ಹೆದರದೆ ನಿಶ್ಚಲರಾಗಿ ತಪಸ್ಸನ್ನಾಚರಿಸುತ್ತಿದ್ದರು. ವನ್ಯ ಜೀವಿಗಳೆಲ್ಲ ಅವರಿಗೆ ಸಹಚರಿಗಳಾಗಿದ್ದವು.

ಆತನ ಈ ಸಾತ್ವಿಕ ತಪಸ್ಸು ಸ್ವಲ್ಪ ಕಾಲದಲ್ಲಿಯೇ ಸಫಲಗೊಂಡಿತು. ಆತನ ತಪೋಧಿಷ್ಠಾನ ದೇವತೆಯಾದ ಶ್ರೀ ನಾರಾಯಣ ಮೂರ್ತಿಯು ಪ್ರತ್ಯಕ್ಷನಾದನು. ಶಂಖ, ಚಕ್ರ, ಗದಾ, ಪದ್ಮಗಳಿಂದ ಅಲಂಕೃತವಾದ ಚತುರ್ಭುಜಗಳೂ, ಕಿರೀಟ ಹಾರಾದಿ ದಿವ್ಯಾಭರಣಗಳಿಂದ ಶೋಭಿತ, ದಿವ್ಯಾಂಗಗಳೂ, ಶ್ರೀವತ್ಸಾಂಕಿತ ವಕ್ಷೋಭಾಗವೂ ನೀಲ ಮೇಘ ಶ್ಯಾಮವರ್ಣವೂ, ಪ್ರೇಮಾತಿಶಯದಿಂದ ಕೂಡಿದ ಮಂದಹಾಸವೂ, ವಕ್ಷಃಸ್ಥಳದಲ್ಲಿ ಶ್ರೀ ದೇವಿಯೂ ಆ ದಿವ್ಯ ಮೂರ್ತಿಯಲ್ಲಿ ರಾರಾಜಿಸುತ್ತಿದ್ದವು. ಸಮಾಧಿಯಲ್ಲಿ ಮಗ್ನನಾಗಿದ್ದ ಆ ಕೂರ್ಮ ಮಹಾ ಮುನಿಯನ್ನು ತನ್ನ ದಿವ್ಯವಾದ ಕಮಲ ಕೋಮಲ ಕರಗಳಿಂದ ಸ್ಪರ್ಶಿಸಿದನು. ಮಹಾಮುನಿಯು ಸಮಾಧಿಯು ಅನಿರ್ವಚನೀಯ ಆನಂದಾನುಭವದೊಡನೆ ಭಂಗವಾಯಿತು. ಕಣ್ತೆರೆದು ದಿವ್ಯಮೂರ್ತಿಯನ್ನು ಸಂದರ್ಶಿಸಿದನು. ಕೋಟಿ ಸೂರ್ಯಪ್ರಭಾ ಭಾಸಮಾನವಾದ ಅಲೌಕಿಕ ತೇಜಸ್ಸಿನಿಂದ ಪ್ರಕಾಶಿಸುತ್ತಾ ಪ್ರಸನ್ನನಾದ ಇಷ್ಟ ದೇವರ ದರ್ಶನವಾಯಿತು. ಶರೀರವು ಸ್ವೇದಜಲದಿಂದ ತೊಯ್ದು ಹೋಯಿತು. ಕಂಠವು ಗದ್ಗದಿತವಾಯಿತು. ಆನಂದಾಶ್ರುಗಳು ಧಾರಾಕಾರವಾಗಿ ಪ್ರವಹಿಸಿದುವು. ಸ್ವಲ್ಪ ಕಾಲ ಏನೂ ತೋರದೆ, ದಿವ್ಯಮೂರ್ತಿಯನ್ನು ಸಂದರ್ಶಿಸುತ್ತಾ ಮಗ್ನನಾದನು.

ಕೆಲವು ಕ್ಷಣಗಳನಂತರ ಮಹಾಮುನಿಯು ತನ್ನ ನಿಮಗ್ನತೆಯಿಂದ ಎಚ್ಚರವಾಗಿ, ಏನು ಮಾಡಲೂ ತೋರದೆ, ಭಕ್ತಿ ಪರವಶತೆಯಿಂದ "ಸ್ವಾಮೀ" ಎನ್ನುತ್ತಾ ಭಗವಂತನ ಪಾದ ಪಯೋಜಗಳಲ್ಲಿ ತನ್ನ ಸಂಪೂರ್ಣ ಶರೀರವನ್ನು ಕೆಡವಿದನು. ಯೋಗಿಹೃದಯಾನಂದ ಕಾರಕನಾದ ಶ್ರೀ ನಾರಾಯಣ ಮೂರ್ತಿಯು ಈ ಕೂರ್ಮ ಮಹರ್ಷಿಯನ್ನು ತನ್ನ ಕರಕಮಲಗಳಿಂದ ಶಿಶುವನ್ನಂತೆ ಮೇಲಕ್ಕೆತ್ತಿ ಕರುಣಾರಸಭರಿತ ದಿವ್ಯ ನೇತ್ರಗಳನ್ನು ಕರುಣಿಸಿದನು.ಆಗ ಮುನಿಕುಲಶೇಖರನು, ಕೈಗಳನ್ನು ಜೋಡಿಸಿಕೊಂಡು "ಸ್ವಾಮಿ" ನೀನು ದೀನ ಶರಣ್ಯನು. ಭಕ್ತಮಂದಾರನು ನನ್ನ ಅಜ್ಞಾನಾಂಧಕಾರವನ್ನು ನೀಗಿ ಸುಜ್ಞಾನ ಜ್ಯೋತಿಯನ್ನು ಬೆಳಗಿಸಲು ದಯಮಾಡಿಸಿದೆಯಾ? ಪ್ರಭುವೇ, ಮಾನವರು ಮಾಯಾಮೋಹಿತರಾಗಿ ಆಶಾಪಾಶಗಳಲ್ಲಿ ಸಿಲುಕಿದ್ದಾರೆ. ಅಲ್ಲದೆ ಪಾಪ ಕೂಪಗಳಲ್ಲಿ ಬಿದ್ದು ಏನು ಮಾಡಲೂ ತೋರದೆ ತೊಳಲುತ್ತಿದ್ದಾರೆ. ಹಗಲೂರಾತ್ರಿ ಕಳವಳ ಪಡುತ್ತಿದ್ದಾರೆ. ತಂದೆ,ತಾಯಿ, ಗುರು ದೈವಗಳಲ್ಲಿ, ಭಯ, ಭಕ್ತಿಗಳನ್ನು ತೊರೆದು ವಿಷಯಾಸಕ್ತರಾಗಿ, ಕಾಲನನ್ನೇ ತಿರಸ್ಕರಿಸಿ, ಪಾಪವೃತ್ತಿಯಲ್ಲಿ ತೊಡಗಿದ್ದಾರೆ. ರಾಗದ್ವೇಷಗಳಿಂದಲೂ,

ಈರ್ಷ್ಯಾಸೂಯೆಗಳಿಂದಲೂ ತಮ್ಮನ್ನು ತಾವೇ ವಂಚನೆಮಾಡಿ ಕೊಳ್ಳುತ್ತಿದ್ದಾರೆ. ದಾನಧರ್ಮಗಳಾಗಲಿ, ದಯಾ–ಅನುರಾಗಗಳಾಗಲಿ, ಪ್ರೀತಿ ವಾತ್ಸಲ್ಯಗಳಾಗಲಿ, ನ್ಯಾಯ ನೀತಿಗಳಾಗಲಿ, ದೀಪ ಹಿಡಿದು ಹುಡುಕಿದರೂ ಕಾಣದಾಗಿದೆ. ನರರು ವಾನರರಾಗಿ ಮಾನವರು ದಾನವರಾಗಿ ಸ್ವಚ್ಛಂದವಾಗಿ ವಿಹಾರ ಮಾಡುತ್ತಾ ಪಾಪಾಗ್ನಿಗೆ, ಆಹುತಿಯಾಗಿ ಕಾಲನಿಗೆ ಬಲಿಯಾಗುತ್ತಿದ್ದಾರೆ. ಓ, ಶ್ರೀ ನಾರಾಯಣ ಮೂರ್ತಿ, ಆಪದುದ್ಧಾರಕಾ, ಮಾನವರು ಪಾಪಗಳಿಂದ ಮುಕ್ತರಾಗಿ ನಿನ್ನ ಚರಣ- ಕಮಲಗಳಲ್ಲಿ ಸೇರುವಂತೆ ಅನುಗ್ರಹಮಾಡು. ಇದೇ ನನ್ನ ಆಕಾಂಕ್ಷೆ ಎಂದು ನಾನಾ ಪ್ರಕಾರವಾಗಿ ಬೇಡಿಕೊಂಡನು. ಪರಮಾತ್ಮನು ಪ್ರಸನ್ನನಾಗಿ ಮೃದುಮಧುರ ಮಾತುಗಳಿಂದ– ಎಲ್ಲೆ, ಕೂರ್ಮ ಮನಿವರಾ, ನಿನ್ನ ಇಚ್ಛೆಯ ಪ್ರಕಾರ, ನಾನು ಈ ಗಿರಿಯಲ್ಲಿ ಶ್ರೀ ಲಕ್ಷ್ಮೀ ಆದಿನಾರಾಯಣನೆಂಬ ನಾಮದಿಂದ ಶಿಲಾಮೂರ್ತಿಯಾಗಿ ಉದ್ಭವಿಸಿ ಮನುಜರ ಮನೋರಥಗಳನ್ನು ಸಫಲಗೊಳಿಸುತ್ತಾ ಮಂಗಳವನ್ನುಂಟು ಮಾಡುತ್ತೇನೆ, ನಿನ್ನ ಆಕಾಂಕ್ಷೆಯು ಸಫಲವಾಗಲಿ, ಇಂದಿನಿಂದ ಲೋಕವು ಈ ಗಿರಿಯನ್ನು ನಿನ್ನದೇ ಹೆಸರಿನಿಂದ ಕೂರ್ಮಗಿರಿ ಎಂದು ಕರೆಯಲಿ, ಎನ್ನುತ್ತಾ ಭಗವಂತನಾದ ಶ್ರೀ ನಾರಾಯಣ ಮೂರ್ತಿಯು ಸಮೀಪದಲ್ಲೇ ಇದ್ದ ಒಂದು ಗುಹೆಯಲ್ಲಿ ಅಂತರ್ಧಾನನಾದನು.

ಕೂರ್ಮಮಹಾಮುನಿಯು, ಪರಮಾತ್ಮನು ಪ್ರವೇಶಿಸಿದ ಗುಹೆಯನ್ನು ಹೊಕ್ಕು, ಪರಮಾತ್ಮನನ್ನು ಹುಡುಕಿ, ಕಾಣದೆ ನಿಶ್ಚೇಷ್ಟನಾಗಿ ಚಿಂತಿಸುತ್ತಿರುವಾಗ, ಆ ಗುಹೆಯ ಮಧ್ಯಭಾಗವನ್ನು ಭೇದಿಸಿಕೊಂಡು ತ್ರಿಕೋಣಾಕಾರವಾದ ಶಿಲಾಮೂರ್ತಿಯಾಗಿ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಉದ್ಭವವಾಯಿತು. ಮುನೀಂದ್ರನು ಹಾಗೆ ಉದ್ಭವವಾದ ಶಿಲಾಮೂರ್ತಿಯನ್ನು ಅತ್ಯಂತ ಆಶ್ಚರ್ಯ–ಸಂಭ್ರಮಗಳಿಂದ ಸಂದರ್ಶಿಸಿ, ಮುಕುಳಿತಕರನಾಗಿ ಭಕ್ತಿಯ ಅತಿರೇಕವನ್ನು ಪಡೆದು ಸ್ತೋತ್ರ ಮಾಡಲು ತೊಡಗಿದನು.

ಶ್ರೀ ಆದಿನಾರಾಯಣಾ, ಲೋಕರಕ್ಷಾಪರನಾರಾಯಣಾ, ದುಃಖ ಸಂತ್ರಾಣ ಪಾರೀಣ, ಭಕ್ತೈಕರಕ್ಷಾಮಣೇ, ದೀನಚಿಂತಾ ಮಣೇ ದೇವತಾನೀಕ ಸುಶ್ಲೋಕ ಚಾರಿತ್ರ್ಯ ನೀಲೋತ್ಪಲ ಶ್ಯಾಮಗಾತ್ರ, ಮಿತ್ರೇಂದುನೇತ್ರಾ, ಪವಿತ್ರಾ ಸುಮಿತ್ರಾ ಲಸದ್ದೇವಾ ಭೂಷೋಜಲಾಂಗಾ, ಶುಭಾಂಗಾ, ವರಾಂಗಾ, ಲೋಕ ತ್ರಯಾಂತರಂಗಾ, ಸುರಾರಿ ಪ್ರಭಂಗಾ, ಅನಂಗಾರಿ ಸಂಸೇವ್ಯ ದಿವ್ಯ ಸ್ವಭಾವ

ಪ್ರಭಾವಾ, ಪ್ರಭೋ, ದೇವದೇವಾ, ನಿರಾಕಾರ ಸಾಕಾರ– ಓಂಕಾರಸ್ವರೂಪಾ, ಮಹಾಜ್ಞಾನ ದೀಪಾ, ಪ್ರತಾಪಾ, ಪ್ರಭೋ, ಕೂರ್ಮಾಕೃತಿರಾಗ್ರ ಪಾಣಿ ಹರೀ, ವಾಸುದೇವಾ, ಅನಂತಾ, ಮುಕುಂದಾ, ಮುರಾರೀ ಕವಿಸ್ತೆ ಕವಿಸ್ತೆ ನಮಸ್ತೇ ನಮಃ!

ಎಂದು ಸ್ತೋತ್ರ ಮಾಡಿ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಉತ್ಸವ ಶಿಲಾಮೂರ್ತಿಗೆ ಪ್ರದಕ್ಷಿಣೆಮಾಡಿ, ಹೊರಟು ಹೋದನು. ಈ ದೇವರಿಗೆ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿ ಎಂಬ ಹೆಸರು ಸ್ಥಿರವಾಗಿ ಪ್ರಖ್ಯಾತವಾಗಿದೆ.

3

ಇಂದಿನ ಆಂಧ್ರ ಪ್ರದೇಶದಲ್ಲಿನ ಕಡಪ ಜಿಲ್ಲೆಯು, ಹಿಂದೆ ರಾಯಲ ಸೀಮೆಯ ಪ್ರದೇಶಕ್ಕೆ ಸೇರಿತ್ತು. ಈ ಜಿಲ್ಲೆಯಲ್ಲಿ "ದೇವರ ಕಡಪ" ಎಂಬ ಸುಂದರ ಗ್ರಾಮವಿತ್ತು. ಈ ಗ್ರಾಮದಲ್ಲಿ ಎರ್ರಪ್ಪರೆಡ್ಡಿ, ಚಿನ್ನಪ್ಪರೆಡ್ಡಿ ಎಂಬ ಇಬ್ಬರು ಸಹೋದರರು ಇದ್ದರು. ಇವರು ಧನ ಕನಕವಸ್ತು ವಾಹನಾದಿ ಅಷ್ಟೈಶ್ವರ್ಯ ಸಂಪನ್ನರಾಗಿದ್ದರು. ಬಹು ಉದಾರಿಗಳಾಗಿ ಇದ್ದುದರಿಂದ, ಅತಿಥಿ–ಅಭ್ಯಾಗತರನ್ನು ಸೇವಿಸುತ್ತಾ ಅನುಪಮ ದಾನ ಶೀಲರೆಂದು ಹೆಸರು ಪಡೆದು ರಾಮಲಕ್ಷ್ಮಣರಂತೆ ಅನ್ಯೋನ್ಯವಾಗಿದ್ದರು. ನಿರಂತರ ಭಗವತ್‌ಕೈಂಕರ್ಯಗಳಲ್ಲಿ ಆಸಕ್ತರಾಗಿರುತ್ತಿದ್ದರು. ಗೋ ಬ್ರಾಹ್ಮಣ ಹಿತಾಸಕ್ತರಾಗಿದ್ದರು. ಪ್ರತಿ ಫಲವಾಗಿ ಹಿತಕರರಾದ ಪರಿವಾರ ಜನದೊಡನೆ ಸುಖವಾಗಿದ್ದರು. ಗ್ರಾಮೀಣರೆಲ್ಲರೂ ಇವರ ಆಶ್ರಯದಲ್ಲಿಯೇ ಸುಖ ಜೀವನ ನಡೆಸುತ್ತಿದ್ದರು.

ಕಾಲವು ಬಹು ಚಂಚಲವಾದುದು. ಕೆಲವು ವರ್ಷಗಳು ಸುಖವಾಗಿ ಕಳೆದವು. ನಂತರ, ಆ ಪ್ರದೇಶದಲ್ಲಿ ಮಳೆಗಳು ಆಗಲಿಲ್ಲ. ಅದಕ್ಕಾಗಿ ರುದ್ರಾಭಿಷೇಕಗಳು, ಪರ್ಜನ್ಯಜಪಗಳೂ, ಮಹಾಭಾರತದ ವಿರಾಟಪರ್ವ, ಶ್ರೀಮದ್ರಾಮಾಯಣದ ಉತ್ತರಕಾಂಡ ಪಾರಾಯಣಗಳೂ, ಬೀದಿ ಬೀದಿಗಳಲ್ಲೂ ನಡೆದವು. ಆದರೂ ಮಳೆಗಳು ಆಗಲೇ ಇಲ್ಲ. ಮಾನವರಿಗೆ ತಿನ್ನಲು ಆಹಾರವಾಗಲಿ, ಕುಡಿಯಲು ನೀರಾಗಲಿ ಇಲ್ಲದೇ ಹೋಯಿತು. ಹುಲ್ಲುಗಾವಲುಗಳು ಒಣಗಿ ಹೋದವು. ಜಲಾಶಯಗಳಲ್ಲಿ, ತೇವ ಸಹ ಇಲ್ಲದಾಯಿತು. ಹೊಲ–ಗದ್ದೆಗಳಲ್ಲಿ ಬಿರುಕುಗಳು ಬಂದಿದ್ದವು. ಹೀಗೆ ಕ್ಷಾಮದೇವತೆಯು ವಿಕಟಾಟ್ಟಹಾಸಮಾಡಿ ತಾಂಡವ ನೃತ್ಯವಾಡುತ್ತಿರಲು, ಜನರು ಆಹಾಕಾರಗಳಿಂದ ಹಾಹಾಕಾರ

ಮಾಡುತ್ತಿದ್ದರು. ದೈವ ಲೀಲೆಯನ್ನು ಯಾರು ತಾನೆ ತಿಳಿಯಬಲ್ಲರು.

ಎರ್ರಪ್ಪರೆಡ್ಡಿಯ ಪರಿವಾರವು ಸಹ, ಕ್ಷಾಮದೇವತೆಯ ದೃಷ್ಟಿಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಸುಖವಾಗಿದ್ದ ಸಂಸಾರವು ಭಿಕ್ಷುಕರಿಗೆ ಭಿಕ್ಷೆ ನೀಡಲು ಸಹಾ ಸಾಧ್ಯವಾಗದ ಸ್ಥಿತಿಯನ್ನು ಹೊಂದಿತು. ತಮ್ಮ ಈ ದೀನಸ್ಥಿತಿಗಾಗಿ, ರೆಡ್ಡಿ ಸಹೋದರರು ಹಗಲೂ ರಾತ್ರಿ ಚಿಂತಿಸತೊಡಗಿದರು, ಆಲೋಚನೆಗೆ ಕೊನೆಯಿಲ್ಲದಾಯಿತು. ತಮ್ಮನ್ನು ಆಶ್ರಯಿಸಿದ್ದ ಜನರೊಡನೆ, ಮತ್ತು ಪಶು ಸಮೂಹದೊಡನೆ, ದೀರ್ಘಕಾಲ ಸುಖಜೀವನ ನಡೆಸಿದ್ದ ಗ್ರಾಮವನ್ನೂ, ಬಂಗಾರ ಬೆಳೆಯುತ್ತಿದ್ದ ಹೊಲಗದ್ದೆಗಳನ್ನೂ ಬಿಟ್ಟು ನೀರು ಮೇವುಗಳನ್ನು ಹುಡುಕಿಕೊಂಡು ತಮ್ಮ ಊರಿನಿದ ಪಶ್ಚಿಮ ದಿಕ್ಕಿಗೆ ಪ್ರಯಾಣ ಮಾಡಿದರು.

ಹಳ್ಳಿಗಳನ್ನೂ ನಗರಗಳನ್ನೂ ಹಾದು ಹೋಗುತ್ತಾ ಅಲ್ಲಲ್ಲಿ ನಿಂತು, ಪಶುಗಳನ್ನು ಮೇಯಿಸಿಕೊಳ್ಳುತ್ತಾ ತಾವು ವಿಶ್ರಮಿಸಿಕೊಳ್ಳುತ್ತಾ ಹಲವಾರು ಮೈಲಿಗಳನ್ನು ನಡೆದು ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯು ವಿರಾಜಿಸುತ್ತಿರುವ ಈ ಕೂರ್ಮಗಿರಿ ಪ್ರಾಂತ್ಯದ ಅರಣ್ಯಕ್ಕೆ ಒಂದು ಮಧ್ಯಾಹ್ನ ಬಂದು ಸೇರಿದರು. ಊಟದ ಸಮಯ ಸಮೀಪಿಸುತ್ತಿದೆ. ಎರ್ರಪ್ಪ ರೆಡ್ಡಿಯು ತನ್ನ ಅನುಚರರನ್ನು ಇಲ್ಲಿಯೇ ನಿಲ್ಲಿಸಿಕೊಂಡು ಅಡಿಗೆ ಮಾಡಿಕೊಳ್ಳಲು ಹೇಳಿದನು. ಪೈರು ಪಚ್ಚೆಗಳಿಂದ ಕೂಡಿದ ಈ ಅರಣ್ಯದಲ್ಲಿ ಪಶುಗಳು ಮೇದು ತೃಪ್ತಿಯಾಗಿ ನೀರು ಕುಡಿದು ವಿಶ್ರಾಂತಿ ತೆಗೆದುಕೊಳ್ಳುತ್ತಾ ಮೆಲುಕು ಹಾಕುತ್ತಾ ನಿದ್ರಿಸಿದುವು. ಅಲ್ಲಲ್ಲಿ ಬೆಟ್ಟದಿಂದ ಹರಿದು ಬರುತ್ತಿರುವ ಚಿಲುಮೆಯ ಕಾಲುವೆಗಳು ಕಲ ಕಲ ನಾದ ಮಾಡುತ್ತಿದ್ದವು. ಜಿಂಕೆಗಳು ಸಂತೋಷಾತಿರೇಕದಿಂದ ನೆಗೆದಾಡುತ್ತಿದ್ದುವು. ಅಡಿಗೆಗಳನ್ನು ತಯಾರಿಸಿ ಊಟ ಮಾಡಿ ಎಲ್ಲರೂ ವಿಶ್ರಾಂತಿ ಪಡೆದರು. ಆದರೆ ಎರ್ರಪ್ಪರೆಡ್ಡಿ ಸೋದರರಿಗೆ ನಿದ್ರೆ ಬರಲಿಲ್ಲ. ಇಬ್ಬರೂ ಆ ಪ್ರದೇಶವನ್ನೆಲ್ಲಾ ಸುತ್ತಿಬಂದರು. ಫಲವತ್ತಾದ ಭೂಮಿ, ನೀರಿನ ವಸತಿ, ಪುಷ್ಕಳವಾದ ಮೇವು, ಪ್ರಶಾಂತ ವಾತಾವರಣ, ಇವೆಲ್ಲ ಅವರ ಹೃದಯಗಳನ್ನು ಆಕರ್ಷಿಸಿದುವು. ಇಬ್ಬರೂ ಚೆನ್ನಾಗಿ ಪರ್ಯಾಲೋಚಿಸಿದರು. ಆಶ್ರಿತ ಪರಿವಾರದವರನ್ನು ಕರೆದು ಅವರ ಅಭಿಪ್ರಾಯಗಳನ್ನು ತಿಳಿದರು. ಎಲ್ಲರ ಸಮ್ಮತಿಯನ್ನೂ ಗ್ರಹಿಸಿದರು. ನಂತರ ಕೂರ್ಮಗಿರಿಗೆ ಪಶ್ಚಿಮಕ್ಕೆ ಅರ್ಧಮೈಲಿ ದೂರದಲ್ಲಿ ಗುಡಿಸಲು ಮನೆಗಳನ್ನು ಅನುಕೂಲವಾಗಿ ಕಟ್ಟಿಕೊಂಡು ತಮ್ಮ ಪರಿವಾರ ಆಶ್ರಿತ ಜನ ಮತ್ತು ಪಶುಗಳ

ಸಮೇತ ಎರ್ರಪ್ಪರೆಡ್ಡಿ ಸಹೋದರರು ಚಿರಸ್ಥಾಯಿಯಾಗಿ ನಿಂತರು. ಇವರೆಲ್ಲರ ಆವಾಸ ಸ್ಥಾನವೇ ಒಂದು ಚಿಕ್ಕ ಗ್ರಾಮವಾಯಿತು. ಆ ಗ್ರಾಮಕ್ಕೆ ಅವರು ಎಲವಲೋಡು ಎಂದು ಹೆಸರಿಟ್ಟರು. ಬಹುಶಃ ಆ ಗ್ರಾಮಕ್ಕೆ "ವೇಲುಪುವಾಡ" ಎಂದಿರಬಹುದು. "ವೇಲುಪುವಾಡ"ಎಂದರೆ ದೇವರ ಬೀದಿ ಎಂದರ್ಥ. ಕ್ರಮವಾಗಿ ವೇಲುಪು, ಯೇಲುಪು, ಎಲವ ಎಂದಾಗಿ ವಾಡ ಎಂಬುದು ವೋಡ, ಲೋಡು ಎಂದಾಗಿರಬಹುದು ಎಂದು ಊಹಿಸಬಹುದು. ಎರ್ರಪ್ಪರೆಡ್ಡಿ ಸೋದರರು ಈ ಕೂರ್ಮಗಿರಿ ಪ್ರಾಂತ್ಯವನ್ನೇ ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡು ಫಲವತ್ತಾದ ಹೊಲ ಗದ್ದೆಗಳಲ್ಲಿ ಬೆಳೆಗಳನ್ನು ಬೆಳೆಸುತ್ತಾ ತಮ್ಮ ಧರ್ಮ ಸಂಪ್ರದಾಯಗಳನ್ನು ಮರೆಯದೆ ಸುಖ ಜೀವನ ನಡೆಸುತ್ತಾ ತಮ್ಮ ಎಲ್ಲ ಪರಿವಾರ ಜನರೊಡನೆ ಎಲವಲೋಡು ಗ್ರಾಮದಲ್ಲಿ ಸ್ಥಾಯಿಯಾಗಿ ನಿಂತರು.

4

ಕಂಚಿ ನಗರದಲ್ಲಿ, ಸುಂದರಶರ್ಮ, ಜ್ಞಾನಾಂಬ ಎಂಬ ಬ್ರಾಹ್ಮಣ ದಂಪತಿಗಳಿದ್ದರು. ಪವಿತ್ರ ಜೀವನ ನಡೆಸುತ್ತಿದ್ದ ಆ ದಂಪತಿಗಳಿಗೆ ಮಂಗಮ್ಮ, ಲಕ್ಷ್ಮೀದೇವಿಯರೆಂಬ ಇಬ್ಬರು ಪುತ್ರಿಯರಿದ್ದರು. ಸುಂದರಶರ್ಮ ವೇದಾಧ್ಯಯನ ಸಂಪನ್ನ, ಷಟ್ ಶಾಸ್ತ್ರಪಂಡಿತ, ಸ್ವಕರ್ಮಾನುಷ್ಠಾನ ನಿರತ ಒಳ್ಳೆಯ ವಾಗ್ಮಿ ಸನ್ಮಾರ್ಗಗಾಮಿ ಜ್ಞಾನಿ. ಆತನ ಪತ್ನಿ ಪತಿವ್ರತಾಶಿರೋಮಣಿ ಜ್ಞಾನಾಂಬ. ಸರ್ವ ವಿಧದಲ್ಲಿಯೂ ತನ್ನ ಪತಿಗೆ ಅನುರೂಪ ಪತ್ನಿಯಾಗಿದ್ದಳು. ಆಕೆಯು ಪತಿಗೆ ಅನುಕೂಲೆ, ಪತಿಭಕ್ತಿ ಪರಾಯಣೆ. ಪ್ರಪಂಚದಲ್ಲಿ ಸಾಮಾನ್ಯವಾಗಿ, ವಿದ್ಯಾವಂತನಿಗೆ ಧನವೂ, ಧನಿಕನಿಗೆ ವಿದ್ಯೆಯೂ ಒದಗಿರುವುದು ಬಹು ಅಪರೂಪ. ಈ ನಮ್ಮ ಸುಂದರಶರ್ಮ ವಿದ್ಯಾವಂತನೇನೋ ಹೌದು ಆದರೆ ದರಿದ್ರ ದೇವತೆಯು ಆತನನ್ನೇ ದಾರಿದ್ರ್ಯ ದುಃಖಕ್ಕೆ ಯೋಗ್ಯ ಪಾತ್ರನನ್ನಾಗಿ ತಿಳಿದು ಸೇರಿದ್ದಂತೆ ತೋರುತ್ತಿತ್ತು. ಸುಂದರಶರ್ಮನ ಪರಿವಾರಕ್ಕೆ ಒಂದೊಂದು ಸಲ ಒಂದೇ ಹೊತ್ತು ಊಟ, ಮತ್ತೊಂದು ಹೊತ್ತು ಉಪವಾಸ, ತನಗಾಗಲಿ, ಪತ್ನೀ–ಪುತ್ರಿಯರಿಗಾಗಲಿ ಧರಿಸಲು ಸಾಕಾದಷ್ಟು ಬಟ್ಟೆಗಳೂ ಇಲ್ಲ. ಪ್ರತಿದಿನವೂ, ಆತನು ಭಿಕ್ಷೆಗಾಗಿ ಹೊರಡುವುದು. ಭಿಕ್ಷೆ ದೊರೆತದಿನ ಊಟಮಾಡುವುದು, ಇಲ್ಲದಿದ್ದಾಗ, ಹೊಟ್ಟಿತುಂಬ ನೀರು ಕುಡಿದು ಮಲಗುವುದು ಕ್ರಮವಾಗಿ ಹೋಗಿತ್ತು. ಒಂದೊಂದು ದಿನವೂ ಒಂದೆರಡು

ಗಂಡಾಂತರವಾಗಿಯೂ, ಆಗಿ ಕಳೆಯುವುದೇ ಕಷ್ಟವಾಗಿತ್ತು. ಸುಂದರಶರ್ಮ ಕಾಲದನ್ನು ಬಲಾತ್ಕಾರವಾಗಿ ತಳ್ಳುತ್ತಾ ಕಳೆಯುತ್ತಿದ್ದನು. ದುರದೃಷ್ಟವು ಪ್ರಬಲವಾಗಿದ್ದು ಕೊನೆ ಕೊನೆಗೆ ಭಿಕ್ಷೆ ಹೊರೆಯುವುದೂ ದುಸ್ತರವಾಯಿತು. ವಾರದಲ್ಲಿ ಒಂದೆರಡು ದಿನಗಳು ಹೊರತು ಇತರ ದಿನಗಳಲ್ಲೆಲ್ಲಾ ಉಪವಾಸವೇ ಆಗುತ್ತಿತ್ತು.

ಒಂದು ರಾತ್ರಿ, ಆ ದಿನ ತಾನೂ, ಪತ್ನಿ-ಪುತ್ರಿಯರೂ ದಿನವೆಲ್ಲಾ ಉಪವಾಸ. ಮಕ್ಕಳು ಹಸಿವನ್ನು ತಾಳಲಾರದೆ ನೀರು ಕುಡಿದು ಬಲಹೀನತೆಯಿಂದ ಮಲಗಿ ನಿದ್ದೆ ಮಾಡಿದರು. ಸುಂದರಶರ್ಮ ಹಸಿವಿಗಿಂತಲೂ ಹೆಚ್ಚಾಗಿ ತನ್ನ ದೀನಸ್ಥಿತಿಗಾಗಿ ತವಕ ಪಡುತ್ತಾ ಇದ್ದನು. ಆತನ ಬಳಿಯಲ್ಲಿಯೇ ಕುಳಿತು ಪತ್ನಿಯಾದವಳು ಏನುಮಾಡಲೂ ತೋರದೆ, ಮೂಕವೇದನೆಯಿಂದ ಬರುತ್ತಿರುವ ದುಃಖಾಶ್ರುಗಳನ್ನು ತನ್ನ ಸೆರಗಿನಿಂದ ಒರಸಿಕೊಳ್ಳುತ್ತಿದ್ದಳು. ಜರ್ಜರಿತವಾದ, ಮನೆಯ ಮೇಲ್ಛಾವಣಿಯಿಂದ ಇವರ ದೀನ ಸ್ಥಿತಿಯನ್ನು ನೋಡಿ, ಹಾಸ್ಯ ಮಾಡುತ್ತಿರುವಂತೆ ಚಂದ್ರನು ಬೆಳದಿಂಗಳನ್ನು ಚೆಲ್ಲಿದ್ದನು. ಒಂದು ಕಡೆ ಪತ್ನಿ, ಮತ್ತೊಂದು ಕಡೆ ಮಕ್ಕಳು ರಾತ್ರಿ ಅರ್ಧ ಕಳೆದಿರಬಹುದು, ದೀಪದಲ್ಲಿ ಎಣ್ಣೆಯು ಮುಗಿದು ಮನೆಯ ಒಂದು ಮೂಲೆಯಲ್ಲಿ ಮಿನುಗುತ್ತಿತ್ತು. ಸುಂದರಶರ್ಮ ಮುಸುಕು ಮುಸುಕಾದ ಬೆಳಕಿನಲ್ಲಿ ಎಲ್ಲರನ್ನೂ ನಿಸ್ಸಹಾಯಕ ದೃಷ್ಟಿಯಿಂದ ನೋಡಿದನು.

ಬಹುಕಾಲದಿಂದ ಹೃದಯದಲ್ಲಿಯೇ ಅಡಗಿದ್ದ ದುಃಖದ ಸಾಗರವು ಕಟ್ಟೆಯೊಡೆದು ಒಟ್ಟಿಗೆ ಉಕ್ಕಿ ಕೋಡಿಕೋಡಿಯಾಗಿ ಹರಿಯ ತೊಡಗಿತು. ಅಶ್ರು ಪ್ರವಾಹವನ್ನು ತಡೆಯಲು ಸಾಧ್ಯವಾಗಲಿಲ್ಲ. ಕಣ್ಣೀರು ಧಾರಾಕಾರವಾಗಿ ಹರಿಯಿತು. ಗಟ್ಟಿಯಾಗಿ ಅತ್ತನು. ಬಹುವಾಗಿ ಅತ್ತ ನಂತರ ಕಣ್ಣೀರು ಹರಿಯುವುದು ನಿಂತಿತು. ಬಿಸಿಯಾದ ನಿಟ್ಟುಸಿರನ್ನು ಬಿಟ್ಟನು. ತನ್ನ ದುರದೃಷ್ಟಕ್ಕಾಗಿ ತನ್ನನ್ನೇ ನಿಂದಿಸಿಕೊಂಡನು. "ಸ್ವಾಮಿ" ಇದೆಂತಹ ಪರೀಕ್ಷೆ? ವಿದ್ಯಾವಂತನಾಗಿಯೂ ಪತ್ನಿ ಪುತ್ರರಿಗೆ ಒಂದುತುತ್ತು ಅನ್ನವನ್ನು ನೀಡಲಾರದವನಾಗಿದ್ದೇನೆ. ಭಗವಂತ, ನನ್ನನ್ನೇಕೆ ಸೃಷ್ಟಿಸಿದ್ದೀ? ಈ ಜಡ ಜಂಗಮ ಜಗತ್ತನ್ನೇ ಪೋಷಿಸುವ ನಿನಗೆ ನನ್ನದೊಂದು ಕುಟುಂಬ ರಕ್ಷಣೆ ಭಾರವಾಯಿತೆ? ಹಾಗಾದರೆ ನಾನೆಷ್ಟು ಪಾಪಿಷ್ಠ. "ಅದಾನ ದೋಷೇಣ ಭವೇತ್ ದರಿದ್ರಃ" ಎಂದಿದ್ದಾರೆ ತಿಳಿದವರು. ಹಿಂದಿನ

ಜನ್ಮಾಂತರಗಳಲ್ಲಿ ನಾನು ಯಾರಿಗೂ ಒಂದು ಹಿಡಿ ಅನ್ನವನ್ನೂ ಹಾಕಲಿಲ್ಲವೋ ಏನೋ! ಅಯ್ಯೋ, ಅದೃಷ್ಟವೇ. ಇನ್ನೂ ಎಷ್ಟು ದಿನ ಈ ಹಿಂಸೆ ಪರಮೇಶ್ವರಾ, ನನಗೆ ಈ ಜನ್ಮವನ್ನು ಇಲ್ಲಿಗೆ ಸಾಕುಮಾಡು, ನನ್ನನ್ನು ಬೇಗ ನಿನ್ನ ಸನ್ನಿಧಿಗೆ ಸೇರಿಸಿಕೋ" ಹೀಗೆಂದು ತನ್ನ ದುಃಖವನ್ನು ಬಹುವಾಗಿ ತೋಡಿಕೊಂಡನು. ಜ್ಞಾನಾಂಬ ಸಹ ಆತನೊಡನೆ ಕಳವಳಗೊಂಡಳು. ಸ್ವಲ್ಪ ಹೊತ್ತು ಕಳೆಯಿತು. ಉಕ್ಕಿಹೋದ ದುಃಖ ತರಂಗಗಳು ಪುನಃ ಪುನಃ ಅವರ ಹೃದಯ ಸಾಗರದಲ್ಲಿ ಇಳಿದಿಳಿದು ಹೋಗುತ್ತಿದ್ದವು. ಜ್ಞಾನಾಂಬ ತನ್ನ ಪತಿಯನ್ನು ಸಮೀಪಿಸಿದಳು. ದೀನವಾಗಿ ವಿನಯವಾಗಿ "ಸ್ವಾಮಿ, ನನ್ನದೊಂದು ಮಾತು ಅನ್ಯಥಾ ಭಾವಿಸದೆ ಆಲಿಸುತ್ತೇನೆಂದರೆ ಹೇಳ ಬಯಸುತ್ತೇನೆ" ಎಂದಳು. ಸುಂದರ ಶರ್ಮ "ಹೇಳು ಕೇಳೋಣ" ಎನ್ನುವಂತೆ ಭಾವವನ್ನು ಕಣ್ಣಲ್ಲಿ ತುಂಬಿಕೊಂಡು ಆಕೆಯ ಕಡೆ ನೋಡಿದನು. ಜ್ಞಾನಾಂಬ ಹೇಳತೊಡಗಿದಳು "ನೋಡಿ. ಈ ಊರಿನಲ್ಲೇ ಇದ್ದರೆ ನಾವು ಬದುಕಲಾರೆವು. ಮತ್ತೆಲ್ಲಿಗಾದರೂ ಹೋಗಿ ಜೀವನೋಪಾಯವನ್ನು ಕಲ್ಪಿಸಿಕೊಳ್ಳೋಣ. ನನ್ನ ಮಾತನ್ನು ತೊರೆಯ ಬೇಡಿ. ನನ್ನನ್ನೂ ಮಕ್ಕಳನ್ನೂ ನೋಡಿಯಾದರೂ ನನ್ನ ಮಾತನ್ನು ಅಂಗೀಕರಿಸಿ" ಎಂದು ಜ್ಞಾನಾಂಬ ತನ್ನ ಮನೋಭಿಪ್ರಾಯವನ್ನು ತಿಳಿಯ ಪಡಿಸಿದಳು. ಈ ಮಾತನ್ನು ಕೇಳಿ ಸುಂದರಶರ್ಮ ಸ್ವಲ್ಪ ಹೊತ್ತು ಆಲೋಚಿಸಿದನು. ಒಂದು ಅಭಿಪ್ರಾಯವು ಮಿಂಚಿನಂತೆ ಆತನ ತಲೆಯಲ್ಲಿ ಹೊಳೆಯಿತು. ಹೀಗೆಂದನು "ಹೌದು, ಜ್ಞಾನಾಂಬ ನಾವು ಈ ಊರು ಬಿಟ್ಟು ಹೊರಡಬೇಕಾದ್ದೇ. ಒಂದೇ ಊರೇನು, ಕಳೆದ ಜನ್ಮಾಂತರದಲ್ಲಿ ಎಷ್ಟೋ ಪಾಪಮಾಡಿ ಈ ಜನ್ಮದಲ್ಲಿ ಈ ಬಡತನವನ್ನು ಅನುಭವಿಸುತ್ತಿದ್ದೇವೆ. ಆ ಪಾಪಶೇಷವು ನಮ್ಮನ್ನು ಇನ್ನೂ ಹಿಂಸಿಸುತ್ತಲೇ ಇದೆ. ಈ ದೋಷಗಳನ್ನು ದೂರಮಾಡಿಕೊಳ್ಳಲು, ಎಷ್ಟಾದರೂ ತೀರ್ಥಯಾತ್ರೆಗಳನ್ನು ಮಾಡೋಣ. ದಿವ್ಯ ಕ್ಷೇತ್ರಗಳನ್ನು ಸಂದರ್ಶಿಸೋಣ. ಇದು ನಿನಗೂ ಇಷ್ಟವೆಂದೇ ತೋರುತ್ತಿದೆ." ಜ್ಞಾನಾಂಬ ಆಶ್ಚರ್ಯದಿಂದ ತನ್ನ ಸಮ್ಮತಿಯನ್ನು ಸೂಚಿಸುತ್ತಾ ತಲೆ ದೂಗಿದಳು. ಹೀಗೆ, ಆ ದಂಪತಿಗಳು ನಿಶ್ಚಯ ಮಾಡಿಕೊಂಡರು.

ಆ ವೇಳೆಗೆ, ರಾತ್ರಿಯ ಕಡೆಯ ಭಾಗವಾಗಿತ್ತು. ಸುಂದರಶರ್ಮ ಒಂದು ಮಡಿಪಂಚೆಯನ್ನು ಬಗಲಲ್ಲಿಟ್ಟುಕೊಂಡು, ತಂಬಿಗೆ ಕೈಯಲ್ಲಿ ಹಿಡಿದು ಸ್ನಾನಕ್ಕೆ ಹೊರಟನು. ಸ್ನಾನ ಮಾಡಿ, ಸಂಧ್ಯಾವಂದನಾದಿಗಳನ್ನು ಪೂರ್ತಿ ಮಾಡುವ ವೇಳೆಗೆ ಸೂರ್ಯೋದಯವಾಯಿತು. ಆದಿತ್ಯನ ಸ್ವರ್ಣಿಮ ಕಿರಣಗಳು

ವರದರಾಜಸ್ವಾಮಿ, ಅಹೋಬಿಲಾವಧೂತ ಮೊದಲಿಗ ಈಗ ಅವಧೂತ ಮೌಲಿ ಬಿದ್ದ. ಅವಧೂತ ಸೌಂದರ್ಯಳ ಆಸ್ಥಿತಿಯು ಮೌಲಾಂಬಗಳಿಗೆ, ಸಂಪ್ರದಾಯ ಪಡಿಸಿ ಮೌಲಾಂಬಳ ಮತ್ತು ಮಂಗಳ ಮಾಲ್ಯಗಳು ಸಮರ್ಪಿಸಲ್ಪಟ್ಟವು. ಅಭಿಷೇಕ ಜಲವು ತಂದು ಮಂತ್ರಿಯ ಪ್ರಾಣಾಯಾಮವನ್ನು ಪ್ರಯೋಕ್ತಿಸಿ ಭೂ-ಶಿಲ್ಪಗಳ ಅಂಗಡಿಗಳು ತೆರೆದಾಯಿತು. ಗೃಹಿಣಿಯರು ಮಂತ್ರಿಯರು ಮೌಲಾಂಬಳು ಸರ್ವ ವಿಧವಿಧವಾದ ರಂಗೋಲಿಗಳನ್ನು ಅಕ್ಕಿಪ್ಪುಡಿ ಮೌಲಾಂಬಳು ಸಂಸಾರ ಪಾಂಚಭೂತಕೋಣಗಳನ್ನು ಸಂದರಶರ್ಮ ಮೌಲಾಂಬ, ಅವರಿಗೆ ಅಹೋಕ್ಷದ ದರ್ಶನವಾಯಿ ವರದರಾಜ ಸ್ವಾಮಿಯು ದರ್ಶನಾಕಾಂಕ್ಷಿಯಾಗಿ, ಮೌಲಾಂಬಳನ್ನು ಪ್ರವೇಶಿಸಿದನು. ಭಕ್ತಿಯಿಂದ ನಮಸ್ಕರಿಸಿ "ಸ್ವಾಮಿ, ಸರ್ವಜ್ಞ, ಈ ಅಂಜನಗಿರಿಗೆ ಪುಣ್ಯಾನುಬಂಧ ತೀರಿತು" ಎಂದು ಬಣ್ಣಿಸಿದ್ದನು. ಹೌದು–ಎನ್ನುವಂತೆ, ಗಭೀರವಾಣಿಯ ಗಾಂಭೀರ್ಯ ಧ್ವನಿಯೂ ಆಯಿತು. ಸ್ವಾಮಿಗೆ ಆರತಿಯ ಸಮರ್ಪಣೆಯೂ ಆಯಿತು. ವರದರಾಜಸ್ವಾಮಿಯು ತಿರೋಭಾವಗಳಿಂದ ಬಲಭಾಗಕ್ಕೆ ಒಂದು ಮಗ್ಗುಲು ಬಿದ್ದು, ದರ್ಶನಮಾಡುತ್ತಿದ್ದ ಸುಂದರಶರ್ಮನಿಗೆ ಸಂಯೋಗವಶದಿಂದ ಅದೇ ಹೂವನು, ತೀರ್ಥದ ಜೊತೆಯಲ್ಲಿ ಆಚಮನ ಕೊಟ್ಟಿತು. ಸುಂದರಶರ್ಮ ಅದನ್ನೇ ಮಹಾಪ್ರಸಾದವೆಂದು ಸ್ವೀಕರಿಸಿದನು.

ದೇವಸ್ಥಾನದಿಂದ ಹೊರ ಹೊರಟು ಭಗವನ್ನಾಮ ಸ್ಮರಣೆ ಮಾಡುತ್ತಾ ಸುಂದರಶರ್ಮ ಬೀದಿಗೆ ಒಂದು ಮುನಃ ಭಿಕ್ಷಾಟನೆ ಮಾಡಲು ತೊಡಗಿದನು. ಅಂದು ಮಧ್ಯಾಹ್ನವಾಗುವ ಮೊದಲೇ ಅಕ್ಕಿ, ಬೇಳೆ, ಕಾಯಿಪಲ್ಯಗಳು ಮೊದಲಾದುವು ಸಾಕಾಗುವಷ್ಟು ದೊರೆತವು. ಅವೆಲ್ಲವನ್ನೂ ತೆಗದುಕೊಂಡು ಸಂತೋಷವಾಗಿ ಮನೆಗೆ ಹಿಂದಿರುಗಿದನು. ತನಗಾಗಿ ಕಾದು ನೋಡುತ್ತಿದ್ದ ಪತ್ನಿ ಪುತ್ರಿಯರನ್ನು ನೋಡಿದನು. ಆತನ ದೃಷ್ಟಿಯಲ್ಲಿ ಧೈರ್ಯ ಗಂಭೀರಗಳು ತುಳುಕುತ್ತಿದ್ದವು. ಪ್ರಾಣಾಂಬ ಸುಂದರಶರ್ಮನನ್ನು ಸಮೀಪಿಸಿ ಭಿಕ್ಷಾಟನೆಯಿಂದ ದೊರೆತ ಪದಾರ್ಥಗಳನ್ನು ತೆಗೆದುಕೊಂಡು ಒಳಗೆ ಪ್ರವೇಶಿಸಿ, ಮಡಿಯುಟ್ಟು ಅಡಿಗೆ ಮಾಡಿದಳು. ಸುಂದರಶರ್ಮ ಮಾಧ್ಯಾಹ್ನಿಕ ದೇವರ ಪೂಜೆ ಮಾಡಿ ಸಿದ್ಧವಾಗಿದ್ದ ಅಡುಗೆಯನ್ನು ದೇವರಿಗೆ ನಿವೇದನ ಮಾಡಿದನು. ನಂತರ ಮಕ್ಕಳು ತಾನೂ ತೃಪ್ತಿಯಾಗಿ ಭೋಜನ ಮಾಡಿದರು. ಆ ದಿನ ಪ್ರಾಣಾಂಬ ಸ್ವ ಹೊಟ್ಟೆ ತುಂಬ ಊಟ ಮಾಡಿದಳು. ಊಟವಾದನಂತರ ಮಕ್ಕಳು ನಿಶ್ಚಂತರಾ ಆಟಪಾಟಗಳಲ್ಲಿ ನಿರತರಾದರು. ಸುಂದರಶರ್ಮ ದೇವಾಲಯದಲ್ಲಿ ನಡ

ವೃತ್ತಾಂತವನ್ನೆಲ್ಲಾ ಜ್ಞಾನಾಂಬಗೆ ಹೇಳಿದನು. ಮರುದಿನ ಬೆಳಗಿನ ಜಾವಕ್ಕೆ ಪ್ರಯಾಣ ಬೆಳೆಸಲು ಸಿದ್ಧನಾಗಬೇಕೆಂದನು. ಆ ರಾತ್ರಿಯೂ ಸುಂದರಶರ್ಮನ ಪರಿವಾರವು ಹೊಟ್ಟೆ ತುಂಬ ಊಟ ಮಾಡಿ ಮಲಗಿದರು. ಎಷ್ಟೋ ದಿನಗಳಿಂದ ಉಪವಾಸ ಮಾಡಿ ಅಂದು ತೃಪ್ತಿಯಾಗಿ ಊಟಮಾಡಿದ ಜ್ಞಾನಾಂಬ ಸಹ ಗಾಢ ನಿದ್ರೆಯಲ್ಲಿ ಮಗ್ನಳಾದಳು. ಜೀರ್ಣವಾದ ಚಾಪೆಯ ಮೇಲೆ ಜ್ಞಾನಾಂಬ ಮಲಗಿ ತನ್ನ ಎರಡೂ ಪಕ್ಕಗಳಲ್ಲಿ ಇಬ್ಬರು ಮಕ್ಕಳನ್ನು ಮಲಗಿಸಿಕೊಂಡು ಇಬ್ಬರ ಮೇಲೂ ಎರಡೂ ಕೈಗಳನ್ನಿಟ್ಟು ನಿದ್ರಿಸುತ್ತಿದ್ದಾಳೆ. ಆದರೆ ಸುಂದರಶರ್ಮನಿಗೆ ತೂಕಡಿಕೆಯಾದರೂ ಬರಲಿಲ್ಲ. ಚಿಂತಾತರಂಗಳಲ್ಲಿ ಸಿಕ್ಕಿ, ಮಗ್ಗಲು ತಿರುಗುತ್ತಾ ನಿಟ್ಟುಸಿರು ಬಿಡುತ್ತಾ ಮಲಗಿದ್ದನು. ಮನೆಯಲ್ಲಿದ್ದ ಅಲ್ಪ ಸಂಖ್ಯೆಯ ಪದಾರ್ಥಗಳನ್ನು ಕಟ್ಟಿಟ್ಟಿದ್ದಾರೆ. ದೇವರ ವಿಗ್ರಹಗಳು– ಸಾಲಗ್ರಾಮ– ಇತ್ಯಾದಿಗಳನ್ನು ಕೃಷ್ಣಾಜಿನದ ಕಕ್ಷಪಾಲದಲ್ಲಿ ಭದ್ರವಾಗಿ ಕಟ್ಟಿಡಲಾಗಿದೆ. ಕೋಳಿಯೂ ಮೊದಲಸಲ ಕೂಗಿತು. ಸುಂದರಶರ್ಮ ಪತ್ನಿಯನ್ನು ಎಚ್ಚರಗೊಳಿಸಿದನು. ಗಾಢ ನಿದ್ರೆಯಲ್ಲಿ ಲೀನಳಾಗಿದ್ದ ಜ್ಞಾನಾಂಬ ಬೆಚ್ಚಿಬಿದ್ದು ಆಕಳಿಸುತ್ತಾ ಎಚ್ಚರಗೊಂಡಳು. ನಿದ್ದೆಗಣ್ಣು ಸರಿಮಾಡಿಕೊಂಡು ಎದುರಿನಲ್ಲಿಯೇ ಕುಳಿತಿದ್ದ ತನ್ನ ಪತಿಯ ಚರಣ ಕಮಲಗಳನ್ನು ಸಂದರ್ಶಿಸಿ ನಮಸ್ಕರಿಸಿದಳು. ಮೊದಲೇ ನಿಶ್ಚಯಿಸಿಕೊಂಡಿದ್ದಂತೆ ಸಾಮಾನುಗಳ ಗಂಟುಗಳನ್ನು ತಲೆಯ ಮೇಲಿಟ್ಟುಕೊಂಡು ಕಿರಿಯ ಮಗಳು ಲಕ್ಷ್ಮೀದೇವಿಯನ್ನು ಕಂಕುಳಲ್ಲೆತ್ತಿಕೊಂಡಳು. ಸುಂದರಶರ್ಮ ದೇವರ ಪೆಟ್ಟಿಗೆಯನ್ನು ಕಂಕುಳಲ್ಲಿಟ್ಟುಕೊಂಡು ಹಿರಿಯ ಮಗಳು ಮಂಗಮ್ಮನನ್ನು ಹೆಗಲ ಮೇಲೆತ್ತಿಕೊಂಡು ದೇವರ ನಾಮ ಸ್ಮರಿಸುತ್ತಾ ಮನೆಯನ್ನು ಬಿಟ್ಟು ಹೊರಟರು. ಬೀದಿಗಳಲ್ಲಿ ಜನ ಸಂಚಾರ ಪ್ರಾರಂಭವಾಗಿಲ್ಲ. ಬೆಳದಿಂಗಳ ಬೆಳಕು ಇನ್ನೂ ಮಂದವಾಗಿಲ್ಲ. ಅಲ್ಲಲ್ಲಿ ಪಕ್ಷಿಗಳು ಒಂದೊಂದು ಸಲ ಚಿಲಿಪಿಲಿ ಗುಟ್ಟುತ್ತಿವೆ. ಮನೆಗಳಲ್ಲಿ ಎಳೆಯ ಮಕ್ಕಳ ಅಳುಗಳು ಅಸ್ಪಷ್ಟವಾಗಿ ಕೇಳಿಸುತ್ತಿವೆ. ಇವನ್ನೆಲ್ಲಾ ಆಲಿಸುತ್ತಾ ಚಂದ್ರಿಕೆಯ ಶೀತಲ ಧವಳ ಪ್ರಕಾಶದಲ್ಲಿ ಬೆಳಗುತ್ತಿರುವ ಕಾಂಚೀ ನಗರದ ದೇವಾಲಯದ ಗೋಪುರಗಳ ಮೇಲಿನ ಸ್ವರ್ಣ ಕಲಶಗಳನ್ನು ಈಕ್ಷಿಸುತ್ತಾ ಸ್ವಗ್ರಾಮವಾಗಿದ್ದ ಕಂಚಿ ನಗರವನ್ನು ಬಿಟ್ಟು ತೀರ್ಥಯಾತ್ರೆಗಾಗಿ ಆ ಪುಣ್ಯ ದಂಪತಿಗಳು ತಮ್ಮ ಮಕ್ಕಳೊಡನೆ ಹೊರಟರು.

ಅವರು ಅದೆಷ್ಟೋ ಊರುಗಳನ್ನು ದಾಟಿನಡೆದರು. ಕಣ್ಣಿಗೆ ಗೋಚರವಾದ ದೇವಸ್ಥಾನಗಳನ್ನೆಲ್ಲಾ ಸಂದರ್ಶಿಸಿದರು. ದಾರಿಯಲ್ಲಿ ದೊರೆತ ಪುಣ್ಯಜಲಗಳಲ್ಲಿ

ಸಮಯದವರೆಗೆ ನಾಟಕ ರಂಗದಲ್ಲಿ ಪ್ರವೇಶಿಸಿ, ಅಭಿನಯ ಮಾಡಿ ಹೋಗುತ್ತಾ ಇರುತ್ತವೆ. ಹೀಗೆ ಜೀವಿಗಳು ಈ ಪ್ರಪಂಚದ ರಂಗದಲ್ಲಿ ಜನನ-ಮರಣಗಳನ್ನು ತಾಳುತ್ತಾ ಇರುತ್ತವೆ. ಈ ರಹಸ್ಯವನ್ನು ಗುರುತಿಸಿದವರು ಈ ನಾಟಕ ರಂಗದಿಂದ ಶೀಘ್ರವಾಗಿ ಹೊರಗೆ ಬರಲು ಕಾತುರ ಪಡುತ್ತಿರುತ್ತಾರೆ. ಈ ರಹಸ್ಯವನ್ನು ತಿಳಿಯಲಾರದವರು ಈ ರಂಗವನ್ನೇ ತಮ್ಮ ನಿಜವಾದ, ಸ್ಥಿರವಾದ ವಾಸಸ್ಥಾನವೆಂದು ತಿಳಿದು ಇಲ್ಲಿಯೇ ಇರಲು ಪ್ರಯತ್ನ ಶೀಲರಾಗುತ್ತಾರೆ. ಆದರೆ ಈ ವಿಶ್ವ ನಾಟಕ ರಂಗದಿಂದ ಯಾರು ಎಲ್ಲಿಯವರೆಗೆ ಇರಬೇಕು, ಯಾರು ಯಾವಾಗ ಇಲ್ಲಿಂದ ಹೊರಟು ಹೋಗಬೇಕು ಎಂಬ ಸಮಯವನ್ನು ಭಗವಂತನ ಹೊರತು ಮತ್ತೆ ಯಾರೂ ನಿರ್ಣಯ ಮಾಡಲಾರರು. ನಮ್ಮ ಯೋಚನೆಯಂತೆ ಯಾವುದೂ ನಡೆಯದು. ಹಾಗೆಂದು ಯಾರೂ ಏನೂ ಮಾಡದೆ ಇರಲೂ ಸಹ ಆಗುವುದಿಲ್ಲ. ಒಂದು ನಾಟಕವನ್ನು ನೋಡುತ್ತಿರುತ್ತೇವೆ. ಅಲ್ಲಿನ ಪಾತ್ರಗಳು ಅಭಿನಯಿಸಿ ವ್ಯಕ್ತ ಪಡಿಸುವ ಸುಖ-ಸಂತೋಷಗಳನ್ನು ದುಃಖ-ರೋದನಗಳನ್ನು ನಮ್ಮವೆಂದೇ ಭಾವಿಸಿ ಸಹಾನುಭವವನ್ನು ತೋರಿಸುತ್ತೇವೆ. ಪಾತ್ರಗಳು ಪ್ರದರ್ಶಿಸುವ ಶೃಂಗಾರಾದಿ ರಸಗಳನ್ನು ಆಸ್ವಾದಿಸುತ್ತಿದ್ದೇವೆ. ಆದರೆ ಈ ನಾಟಕವು ಸತ್ಯವೇ? ಅಲ್ಲ. ಪಾತ್ರಗಳ ಅಭಿನಯ ನಿಜವೇ? ಹೌದು. ಹೇಗೆಂದರೆ ಅಭಿನಯಕಾರರು ಪ್ರದರ್ಶಿಸುವ ರಸಾದಿಗಳನ್ನು ನಮ್ಮವೆಂದೇ ಅನುಭವಿಸುತ್ತಿದ್ದೇವೆ. ಆಯಿತು. ನಾಟಕ ಮುಗಿಯಿತು. ಪರದೆಯೂ ಜಾರಿತು. ನಾಟಕ ಶಾಲೆಯಿಂದ ಹೊರಗೆ ಬರುತ್ತಾ ಇಂತಹ ವ್ಯಕ್ತಿ ಇಂತಹ ಪಾತ್ರವನ್ನು ಚೆನ್ನಾಗಿ ಅಭಿನಯಿಸಿದ ಎಂದು ವರ್ಣಿಸಿಕೊಳ್ಳುತ್ತಾ ಸ್ವಸ್ಥಾನಗಳಿಗೆ ಕುರಿತು ಹೊರಟು ಹೋಗುತ್ತೇವೆ. ಈ ಪ್ರಪಂಚ ನಾಟಕವೂ ಹಾಗೆಯೇ, ನಾಟಕದಲ್ಲಿ ಪಾತ್ರ ವಹಿಸುವುದೇ ಜನ್ಮ. ಅಭಿನಯ ರಸಾನುಭವವೇ ಮಾಯೆ, ನಾಟಕ ಶಾಲೆಯಿಂದ ಹೊರಗೆ ಬರುವುದೇ ವಿವೇಕ. ಅವುಗಳ ವಿಷಯವಾಗಿ ವಿವೇಚಿಸುವುದೇ ಜ್ಞಾನ. ಅಭಿನಯ ಮಾಡಿಸುವವನೂ ಅಭಿನಯ ಮಾಡುವವನೂ ಒಬ್ಬನೇ. ಎಲ್ಲವೂ ಭಗವಂತನ ಸನಾತನ ಲೀಲೆಯು ಎಂದು ಭಾವಿಸುತ್ತಾ ನಿರಂತರವೂ ಭಗವತ್ಸೇವಾ ಸಕ್ತರಾಗಿ ತನು-ಮನ-ವಚನಗಳನ್ನು ಭಗವದರ್ಪಣೆ ಮಾಡಿ ಸನ್ಮಾರ್ಗದಲ್ಲಿ ನಡೆಯುವವರು, ಈ ಜಗನ್ನಾಟಕ ರಹಸ್ಯವನ್ನು ಚೆನ್ನಾಗಿ ಅರಿತು ಸ್ವಾಮಿಯ ಸಾಯುಜ್ಯವನ್ನು ಹೊಂದುವರು. ಅಂತಹ ಜೀವಿಗಳಿಗೆ ಈ ಸೃಷ್ಟಿ ಚಕ್ರದಲ್ಲಿ ಪುನರಾವರ್ತನೆ ಇರುವುದಿಲ್ಲ. ಎಂದರೆ ಈ

ಪ್ರತಿಯೊಬ್ಬ ಮಾನವನೂ, ಸೃಷ್ಟಿ ಚಕ್ರದಲ್ಲಿ ಸಿಕ್ಕಿಕೊಳ್ಳದೆ ಇರಲು ಪ್ರಯತ್ನ ಮಾಡಬೇಕು. ಸೃಷ್ಟಿ ಕರ್ತನನ್ನು ಮರೆಯದೆ, ಸನ್ಮಾರ್ಗಗಾಮಿಯಾಗಿ, ರಾಗದ್ವೇಷಗಳು, ಸುಖ ದುಃಖಗಳು, ಈರ್ಷ್ಯಾಸೂಯೆಗಳು ಇತ್ಯಾದಿ ದ್ವಂದ್ವಗಳಿಗೆ ಅಧೀನನಾಗದೆ ತ್ಯಾಗಿಯೂ ಭಕ್ತನೂ ಆಗಿ ಮನೋ ಬುದ್ಧಿಗಳನ್ನು ಭಗವಂತನಿಗೆ ಸಮರ್ಪಿಸಿ, ಸದ್ಭಾವಶೀಲನಾಗಿ ವರ್ತಿಸುವವನು ನಿಸ್ಸಂದೇಹವಾಗಿ ಮುಕ್ತಿಯನ್ನು ಹೊಂದುವನು. ಯಾವುದೇ ಒಳ್ಳೆಯ ಕಾರ್ಯ ಮಾಡಿದರೂ ಬ್ರಹ್ಮಾರ್ಪಣವೆಂದು ತಿಳಿದು ಯಾವ ಪಾಪಕಾರ್ಯವನ್ನೂ ಎಸಗದೆ , ಮನಸ್ಸಿನಲ್ಲೂ ಎಣಿಸದೆ, ಇರುವುದೇ ಸನ್ಮಾರ್ಗ. ಅದೇ ಭಗವಂತನಿಗೆ ರುಚಿಕರವಾದ, ಹಿತವಾದ ಮಾರ್ಗ.

ಯತ್ಕರೋಷಿ, ಯದಶ್ನಾಸಿ, ಯಜ್ಜುಹೋಷಿ.....ತತ್ಕುರುಷ್ವ ಮದರ್ಪಣಂ ॥

ಸುಂದರಶರ್ಮನನ್ನು ಸನ್ಮಾರ್ಗಿಗಳಲ್ಲಿ ಪರಿಗಣಿಸಬೇಕು. ಆತನು ಪತ್ನೀಪುತ್ರಿಯರೊಡನೆ ಜೀವನಯಾಪನೆ ಮಾಡುತ್ತಾ ಹಂಪ ಸಮುದ್ರದಲ್ಲಿ ವಾಸಿಸುತ್ತಿದನು. ಒಂದುದಿನ ಬೆಳಗಿನ ಜಾವಕ್ಕೆ ಎದ್ದು ಕಾಲ ಕೃತ್ಯಗಳನ್ನೂ ಸ್ನಾನ ಸಂಧ್ಯಾದಿಗಳನ್ನೂ ತೀರಿಸಿಕೊಂಡು ನಿತ್ಯಯಾತ್ರೆಗಾಗಿ ಹರಿಸ್ಮರಣೆ ಮಾಡಿ ಹೊರಗೆ ಹೊರಟನು. ಅಂದಿಗೆ ಒಂದು ವಾರದಿಂದಲೂ ಪುತ್ರಿಯರಾದ ಮಂಗಮ್ಮ-ಲಕ್ಷ್ಮೀದೇವಿಯರಿಗೆ ತೀಕ್ಷ್ಣವಾದ ಜ್ವರ ಬರುತ್ತಿತ್ತು. ಸರಿಯಾದ ಚಿಕಿತ್ಸೆ, ಔಷಧಿ-ಶುಶ್ರೂಷೆಗಳನ್ನು ಮಾಡಿದರೂ ಜ್ವರವು ಕಡಿಮೆಯಾಗಿರಲಿಲ್ಲ. ಜ್ಞಾನಾಂಬ ನಿದ್ರಾಹಾರಾದಿಗಳಿಲ್ಲದೆ ಮಕ್ಕಳಿಗೆ ಶುಶ್ರೂಷೆ ಮಾಡುತ್ತಾ ಸಮೀಪದಲ್ಲಿಯೇ ಕುಳಿತು ಕಳವಳಗೊಳ್ಳುತ್ತಿದ್ದಳು. ಸುಂದರಶರ್ಮನಿಗೂ, ಕಳವಳವಿದ್ದೇ ಇದೆ, ಆದರೂ, ಗತ್ಯಂತರ ವಿಲ್ಲದೆ, ಬೇಗ ಬರಬೇಕೆಂಬ ಉದ್ದೇಶದಿಂದ, ನಿತ್ಯಯಾತ್ರೆಗೆ ಬೇಗನೇ ಹೊರಟನು.

ಸೂರ್ಯೋದಯಕ್ಕೆ ಇನ್ನೂ ಸಾಕಷ್ಟು ಸಮಯವಿತ್ತು. ಕತ್ತಲೆಯು ಇನ್ನೂ ಹರಿದಿರಲಿಲ್ಲ, ಆ ಮುಸುಕಿನಲ್ಲಿ, ಹಳ್ಳ ತಿಟ್ಟುಗಳನ್ನೂ, ಕಾಲುವೆ ಪ್ರವಾಹಗಳನ್ನೂ ದಾಟಿ ಮುಂದೆ ಹೊರಟನು. ದಾರಿಯು ಕಾಣಿಸುತ್ತಿರಲಿಲ್ಲ. ಕಲ್ಲು, ಮುಳ್ಳುಗಳು ಚುಚ್ಚಿಕೊಂಡಿದ್ದರಿಂದ ಪಾದಗಳಿಂದ ರಕ್ತವು ಸುರಿಯುತ್ತಿತ್ತು. ಬಹುದೂರ ನಡೆದರೂ ಸರಿಯಾದ ದಾರಿ ಇನ್ನೂ ಗೋಚರವಾಗಲಿಲ್ಲ. ಬಹು ದೂರ ನಡೆದ ನಂತರ

ಅರುಣೋದಯದ ಬೆಳಕು ಕಾಣಿಸಿತು. ಆಗ ತಾನಿರುವ ಸ್ಥಳವು ಘೋರಾರಣ್ಯವೆಂದು ತೋರಿತು. ಈ ಅರಣ್ಯದಲ್ಲಿಯೂ ಜನಸಂಚಾರ ಕಡಿಮೆಯಾದ್ದರಿಂದ ಯಾವುದೂ ದಾರಿ ಕಾಣಲಿಲ್ಲ. ಎತ್ತರವಾದ ಮರಗಳೂ, ಸಣ್ಣಪುಟ್ಟ ಮೃಗಗಳೂ, ಕ್ರೂರ ಜಂತುಗಳೂ, ಘೋರ ಸರ್ಪಗಳೂ, ಆಗಾಗ ಕಾಣಿಸುತ್ತಿದ್ದವು. ದಿಗಂತದವರೆಗೂ ಕಾಡೇಕಾಡು ಗೋಚರವಾಗುತ್ತಿತ್ತು. ಸರಿಯಾದ ದಾರಿಗಾಗಿ ಬಹುವಾಗಿ ಸುತ್ತಾಡಿದನು. ಸೂರ್ಯೋದಯವೂ ಆಯಿತು. ಬಾಲಭಾಸ್ಕರನ ಸ್ವರ್ಣ ಕಿರಣಗಳು ಎತ್ತರವಾದ ಮರಗಳ ಕೊಂಬೆಗಳಲ್ಲಿನ ಎಲೆಗಳ ಸಂದಿಗಳಿಂದ ಭೂಮಿಯನ್ನು ಇಣುಕಿ ನೋಡುತ್ತಿದ್ದು ಮುಂದೆ ಹೋಗಲೂ, ಹಿಂದಿರುಗಲೂ ಸಹ ಸಾಧ್ಯವಾಗಲಿಲ್ಲ. ತಾನು ಎಲ್ಲಿಗೆ ಸೇರಿದ್ದಾನೋ, ಎಲ್ಲಿಗೆ ಹೋಗಬೇಕೋ ತಿಳಿಯದ ಸ್ಥಿತಿಯನ್ನು ಹೊಂದಿದ್ದನು, ಸುತ್ತಾಡಿ ಸುತ್ತಾಡಿ ಬಳಲಿ ಬೆಂಡಾದನು. ಮಧ್ಯಾಹ್ನವಾಯಿತು. ಚಂಡ ಭಾನುವಿನ ಪ್ರಚಂಡ ಕಿರಣಗಳು ವೃಕ್ಷಗಳ ಮೇಲ್ಭಾಗದಿಂದ ನೇರವಾಗಿ ಬೀಳುತ್ತಿವೆ. ಆಹಾ! ದೇವರೇ! ನಿನ್ನ ನಾಟಕವನ್ನು ಎಷ್ಟೊಂದು ವರ್ಣಿಸಲಿ, ದಾರಿ ತಿಳಿಯದ ಈ ಘೋರಾರಣ್ಯದಲ್ಲಿ ಕೆಡವಿ, ನನ್ನ ಮನೋನಿಗ್ರಹವನ್ನು ಪರೀಕ್ಷಿಸಲು ಎಣಿಸಿದೆಯಾ? ಒಂದು ಕಡೆ ಜ್ವರದಿಂದ ಪೀಡಿತರಾಗಿರುವ ಮಕ್ಕಳು, ಇನ್ನೊಂದು ಕಡೆ ಕಾತರತೆಯಿಂದ ನನ್ನ ಆಗಮನಕ್ಕಾಗಿ ಬಿರಿಗಣ್ಣಿನಿಂದ ಕಾದುನೋಡುತ್ತಿರುವ ಪತ್ನಿ; ಅಯ್ಯೋ! ನನ್ನನ್ನೇಕೆ ಹೀಗೆ ಪೀಡಿಸುತ್ತಿದ್ದೀಯೆ? ಸ್ವಾಮಿ, ನಿನಗಿದು ಸಂತೋಷವೇ? ನಿನಗಿದು ಸಂತೋಷವನ್ನೇ ಉಂಟುಮಾಡುವುದಾದರೆ ನಿನ್ನ ಆನಂದಕ್ಕೆ ನಾನು ಅಡ್ಡಿಯಾಗುವುದಿಲ್ಲ. ನನ್ನನ್ನೂ ಅಳುವಂತೆ ಮಾಡಿ, ಮತ್ತಷ್ಟು ದುಃಖಕ್ಕೆ ಈಡು ಮಾಡು. ನಿನ್ನನ್ನು ಭಕ್ತವತ್ಸಲನೆಂದೂ, ದೀನ ರಕ್ಷಕನೆಂದೂ– ಒಂದೇನು ಅನೇಕ ಬಿರುದುಗಳನ್ನು ಕೊಟ್ಟು ಜನ ಪೂಜಿಸುತ್ತಾರೆ. ಆ ಬಿರುದುಗಳಿಗೆಲ್ಲ ಏನೂ ಅರ್ಥವಿಲ್ಲವೇ? ಇದೆ. ಎಲ್ಲರನ್ನೂ ಚೆನ್ನಾಗಿಯೇ ರಕ್ಷಿಸುತ್ತಿದ್ದಿ. ಆದರೆ ನನ್ನೊಬ್ಬನ ಮೇಲೆ ಮಾತ್ರ ದಯೆ ತೋರುತ್ತಿಲ್ಲ. ಹೌದು, ಏಕೆ ದಯೆ ವಾಡಬೇಕು? ಅವಶ್ಯಂ ಅನುಭೋಕ್ತವ್ಯಂ ಕೃತಂಕರ್ಮಶುಭಾಶುಭಂ! ನನ್ನ ಪೂರ್ವಜನ್ಮಕೃತ ಫಲ. ನಿನ್ನತಪ್ಪೇನೂ ಅಲ್ಲ. ಸ್ವಾಮಿ, ಅಜ್ಞಾನಾವೇಶದಲ್ಲಿ ನಿನ್ನನ್ನೂ ನಿಂದಿಸಿದೆ. ನೀನು ಆದಿಮಧ್ಯಾಂತರ ರಹಿತನಲ್ಲವೇ? ನಿನ್ನನ್ನು ಹೊರತು ನನ್ನನ್ನು ಸಂರಕ್ಷಿಸುವವರು ಮತ್ತಾರೂ ಇಲ್ಲ. ಗೋವಿಂದ ನೀನೇ ನನಗೆ ಶರಣು, ಎಂದು ಅನೇಕ ವಿಧವಾಗಿ ತವಕ ಪಡುತ್ತಾ ದಿಕ್ಕು ಕಾಣದೆ ಬಳಲಿಕೆಯಿಂದ ಅಲ್ಲಿಯೇ ಕುಳಿತು ಕೊಂಡನು.

ತಂಪಾದ ಪ್ರದೇಶ. ಮಂದ ಮಂದವಾಗಿ ಗಾಳಿ ಬೀಸುತ್ತಿತ್ತು. ಬಳಲಿದ್ದ ತರಂಗಿಣಿಯ ಒಡಲಿಗೆ ತೇಲಿ ನಿದ್ರಾದೇವಿಯನ್ನು ಆಹ್ವಾನಿಸಿದವು. ಸುಂದರಕರ್ಮ, ತೆಲ್ಲಕ್ಕೆ ತಂದ ಒಡ್ಡಿಯಲೇ ತನ್ನ ನಿದ್ರೆ ಆವರಿಸಿತು.

ನಿದ್ರೆಯು ಸರಿಯಾಗಿ ಆಗಲಿಲ್ಲ. ಅರೆನಿದ್ರೆಯಲ್ಲಿ ತನಸುಗಳು ಬರುತ್ತಿದ್ದವು. ತನಸಿನಲ್ಲಿ ದೇವರು ಪ್ರತ್ಯಕ್ಷನಾಗಿದ್ದಾನೆ. "ಭಕ್ತಾಗ್ರಣಿಯೆ ಚಿಂತಿಸಬೇಡ. ಇದು ಕೂರ್ಮಗಿರಿ ಪ್ರದೇಶ. ನಾನೇ ಈ ಕೂರ್ಮಗಿರಿಯ ಮೇಲೆ ಶ್ರೀಲಕ್ಷ್ಮೀ ಅರವಿಂದಾಕ್ಷಾಯಿಣಿ ಸ್ವಾಮಿ ಎಂಬ ನಾಮಾಂಕಿತನಾಗಿ ಶಿಲಾಮೂರ್ತಿಯಾಗಿ ಅವತಾರವಾಗಿದ್ದೇನೆ. ಊರ್ಧ್ವಶಿಲಾರೂಪದಲ್ಲಿರುವ ನನ್ನನ್ನು ಆರಾಧಿಸು. ನಿನಗೆ ಸರ್ವಾಭೀಷ್ಟ ಸಿದ್ಧಿಯಾಗಿ ಸುಖವುಂಟಾಗುತ್ತದೆ. ನಿನ್ನ ಸಾಯುಜ್ಯವು ಸುಲಭವಾಗಿ ದೊರೆಯುತ್ತದೆ. ಇದು ಸತ್ಯ ಇದಕ್ಕೆ ಮೂರು ನಿದರ್ಶನಗಳು. ಮೊದಲನೆಯದಾಗಿ, ಈ ಸರೋವರದಲ್ಲಿಯೇ ಒಂದು ಕಾಲುದಾರಿ ಕಾಣಿಸುತ್ತದೆ. ಎರಡನೆಯದು, ಆ ದಾರಿಯಲ್ಲೇ ಹೋದರೆ, ಸರೋವರದಲ್ಲಿಯೇ ಇರುವ ಹಳ್ಳಿಯಲ್ಲಿ ನಿನಗೆ ಸ್ವಯಂವಾಕ ಪ್ರಾಪ್ತಿಯು ಪ್ರಾಪ್ತವಾಗಿ ಲಭಿಸುತ್ತವೆ. ಆಲಿಂದ ನೀನು ಹೇಳಬೇಕಾದ ಸರೋವರವಾಗುವುದು. ಕಡೆಯದಾಗಿ, ನಿನ್ನ ಪುತ್ರಿಯರಿಬ್ಬರೂ ಇಂದೇ ಕಾಲಗತಿಯನ್ನು ಹೊಂದುತ್ತಾರೆ" ಎಂದು ಹೇಳಿ ಭಗವಂತನು ಅದೃಶ್ಯನಾದನು. ಸುಂದರಕರ್ಮನಿಗೆ ಎಚ್ಚರವಾಯಿತು. ಚಕಿತನಾಗಿ ಎದ್ದು ಭಯ-ಆಶ್ಚರ್ಯಗಳಿಂದ ಸುತ್ತಲೂ ನೋಡಿದನು. ಯಾರೂ ಕಾಣಿಸಲಿಲ್ಲ. ಹೃದಯವು ಅತಿ ವೇಗವಾಗಿ ಹೊಡೆದು ಕೊಳ್ಳತೊಡಗಿತು. ಸ್ವಪ್ನದ ಸಂಗತಿಯು ಸತ್ಯವೋ-ಅಸತ್ಯವೋ, ಹಗಲಾಗದು ಎಂದಾದರೂ ಸತ್ಯವಾಗುವುದುಂಟೇ? ಹೀಗೆ ಬಗೆ ಬಗೆಯಾಗಿ ಆಲೋಚಿಸತೊಡಗಿದನು ಹಿಂದಿ ಹಿಂದಿಗಿಂದ ಮಿಳಿತವಾದ ಸ್ವಪ್ನ ಸಂಗತಿಯನ್ನು ಮತ್ತೊಂದು ಸಾರಿ ಮನಸ್ಸಿಗೆ ತಂದುಕೊಂಡನು. ಮಕ್ಕಳೇನಾಗಿದ್ದಾರೋ? ಪತ್ನಿಯು ಎದ್ದು ವಿಲಪಿಸುತ್ತಿದ್ದಾಳೋ? ಎಂದು ಕಳವಳಗೊಳ್ಳ ತೊಡಗಿದನು. ಮಾನಸಿಕ ವೇದನೆಯಿಂದಲೇ ಎದ್ದು ಸ್ವಲ್ಪ ದೂರನಡೆದನು. ದೇವರು ತನಸಿನಲ್ಲಿ ಸಾಕ್ಷಾತ್ಕಾರವಾಗಿ ಹೇಳಿದ ನಿದರ್ಶನದಂತೆ-ಮೊಲಕಾಲುದಾರಿಯು ಕಾಣಬರಿತು. ಹೃದಯದ ಆವೇಗವು ತೀವ್ರಗೊಂಡಿತು. ದುಃಖವು ಉಕ್ಕಿ ಉಕ್ಕಿ ಬಂದಿತು. ಬೇಗ ಬೇಗ ನಡೆಯಲು ಕಾಲುಗಳು ಧಾರವಾಗಿ ತೋರಿದವು. ಹೇಗಾದರೂ ಮಕ್ಕಳನ್ನು ಮೊದಲು ನೋಡಬೇಕು ಎಂದು ತೀವ್ರ ಆಕಾಂಕ್ಷೆಯಿಂದಲೂ ತನ್ನ ಸತಿಗೆ ಈ ಸ್ವಪ್ನ ವೃತ್ತಾಂತವನ್ನು ತಿಳಿಸಿ ಪತ್ನಿ ಪುತ್ರಿಯರೊಡನೆಬಂದು ಶ್ರೀ

ಲಕ್ಷ್ಮೀಅನಿರುದ್ಧಾಂತರಾತ್ಮಿಯ ಸ್ವಾಮಿಯನ್ನು ಅಲಂಕರಿಸಬೇಕೆಂಬ ಇಚ್ಛೆಯಿಂದಲೂ ಹೆಸರಾಗಿ ನಡೆಯಲಾಗಿ ಯಜ್ಞ ಮಾಡಿದನು. ಸ್ವಲ್ಪದೂರ ಬರುವ ಹೊಳಗೆ, ಅಲ್ಲಿ ದೇವಿ ಎಂಬ ಹೆಸರು ಸ್ವಲ್ಪವು ಎದುರಿಗೆ ಬಂದನು, ಅತುರಾತುರವಾಗಿ ಹೋಗುತ್ತಿರುವ ಸಂಸಾರಿಯಾದನನ್ನು ನೋಡಿ ಸ್ವಾಮಿ ತಮ್ಮನು ಉಲಾಪುದು? ಈ ಅರಿವಿನಲ್ಲಿ ಯಾವ ಕಡೆ ಹೋಗುತ್ತೀರಿ? ಎಂದು ಕೇಳಿದನು, ಸಂಸಾರಿಯಾ—ಅಯ್ಯಾ, ನಾಗಿ, ನನ್ನನು ಎಂಬು ಉಂಡೂಂದಿಲ್ಲ. ನಾನು ಹಾಯಾಗಿರುವುದಕ್ಕೆ ಹೋಗುತ್ತೇನೆ. ಅಲ್ಲಿ ನನ್ನ ಪತ್ನಿಪುತ್ರಿಯರು ಹಸುವು ಹಾಯಾಗಿರುವಾಗ ಹೊಳಲುತ್ತಿದ್ದಾರೆ. ನನಗಾಗಿ ಎದುರು ನೋಡುತ್ತಿರುತ್ತಾರೆ. ಇಂದು ಬೆಳಿಗ್ಗೆ ಹಾಲಿಗೆ ಹೋಗಲೇ ಹೊರಟೆ. ಆದರೆ ಕತ್ತಲಲ್ಲಿ ದಾರಿ ಕಾಣದ ಹಾಗೆ ಆಗಿ, ಅನೇಕ ತೊಂದರೆಗಳನ್ನು ಅನುಭವಿಸಿ, ಬರಗೈಯಲ್ಲಿ ಹಿಂತಿರುಗಬೇಕಾಗಿ ಬಂದಿತು. ಹಂಸ ಸಮುದ್ರಕ್ಕೆ ಹೋಗುವ ದಾರಿಯನ್ನು ತೋರಿಸು, ನಿನಗೆ ಪುಣ್ಯವುಂಟಾಗುತ್ತದೆ— ಎಂದು ದೀನನಾಗಿ ಕೇಳಿದನು. ಆತನ ದೈನ್ಯತೆಯ, ಕರುಣೆಯಿಂದ ಹುಟ್ಟಿದ ಆತುರ—ಇವೆಲ್ಲವನ್ನು ನೋಡಿ ಈಶ್ವರದೇವಿಯ ಸ್ವರೂಪವು ಅರಿತುಕೊಂಡಿತು. ಆತನು "ಸ್ವಾಮಿ, ನೀವು ಬಹಳ ತೊಂದರೆಗೆ ಈಡಾಗಿ ಬಳಲಿ ಹೋಗಿರುವಂತೆ ಕಾಣುತ್ತೀರಿ. ಇಲ್ಲಿಗೆ ಸಮೀಪದಲ್ಲಿ ಕಾಣುತ್ತಿರುವುದೇ ನಮ್ಮ ಊರು. ದಯವಿಟ್ಟು ನಮ್ಮ ಮನೆಗೆ ನಮಸ್ಕಾರವನ್ನು ಬನ್ನಿ" ಎಂದು ಪ್ರೇಮಪೂರ್ವಕವಾಗಿ ಹೇಳಿದನು. ಈಶ್ವರದೇವಿಯ ಹೊತ್ತಿಯಲ್ಲಿ ಸಮೀಪದಲ್ಲಿಯೇ ಕಾಣುತ್ತಿದ್ದ ಸಂಸಾರಿಯನ್ನು ಎಂಬ ಗ್ರಹಿಸಿದನು. ಈಶ್ವರ ದೇವಿಯು ಭಯಂಕರ ಮಿಶ್ರ ಗಿರಿಯನ್ನು ಸಿತ-ಸಿತಗಳು ಹೊಂದಿರುವ ಶಬ್ದಗಳನ್ನು ಅದರಿಂದ ಜಾಲಿಯ ಬೇಲಿ ಹೊಲಿಸಿ ತಾಯಿಯಲ್ಲಿ ಬಿಡಿಸಿ ಸಮಿಜವಾಗಿ, ಪುಷ್ಟಳವಾಗಿ ಸ್ವಯಂಪ್ರಕಾಶವನ್ನು ಬಂಧಿಸಿದ, ಸಂಸಾರಿಯ ಮಾತಿನಿಂದ, ಸಂಸಾರದ ಶಬ್ದ ಸಂಸಾರದಲ್ಲಿ ಹೊಲಿಸಿದಂತೆ, ಬಂಧಿಸಿ ಸಂಸಾರದಿಂದ, ಅವನನ್ನು ಆಕರ್ಷಿಸಿದನು. ಸಂಸಾರಿಯಾ, ದೇವಿ ಪಂಚಾಕ್ಷರಿಯ ಕೊಳ್ಳ ಮಂತ್ರಾಕ್ಷರಗಳನ್ನು ಜಾಸ ತಂದಿಟ್ಟ ಹೊಲಿಸಿದಂತೆ ಅವುಗಳಲ್ಲಿ ಅಡಗಿರುವ ಹೊಲಿಸಿದ ಆಕರ್ಷಣೆ. ಈಶ್ವರದೇವಿಯು ಸಂಸಾರಿಯಾಗಿರುವ ಆ ಗಂಡನನ್ನು ತೀರಿಹೋಗಿರುವ ಸಂಸಾರಿಯಾಗಿನಿಂದ ಹೊಲಿಸಿ ಸಂಸಾರಿಯಾಗಿ ಮಾಡಿಸಿದ ಸ್ವಲ್ಪ ಸಮಯ ಸಂಸಾರಿ. ಸಮೀಪದಲ್ಲಿರುವ

ಮನೆಗಳೆ ಹಂಪಸಮುದ್ರದ ಮನೆಗಳು. ನೀವು ಇನ್ನು ಹೋಗಬಹುದು– ಎಂದು ಹೇಳಿ ಸುಂದರಶರ್ಮನನ್ನು ವಂದಿಸಿ ಬೀಳ್ಕೊಟ್ಟು ಈಶ್ವರ ರೆಡ್ಡಿಯು ತನ್ನ ಸುಲಿಗೊಮ್ಮಿಗೆ ಅಭಿಮುಖನಾಗಿ ಹೊರಟು ಹೋದನು.

ಕನಸಿನಲ್ಲಿ, ಭಗವಂತನು ತಿಳಿಸಿದ ಎರಡು ನಿದರ್ಶನಗಳು ನಿಜವಾದುವು. ಮೂರನೆಯದೂ ಸಹ ಸತ್ಯವಾಗದೆ ಇರದು ಎಂದು ಸುಂದರಶರ್ಮ ಬಹಳ ಕಳವಳಗೊಂಡನು. ಮಕ್ಕಳನ್ನು ಸಂರಕ್ಷಣೆ ಮಾಡೆಂದು ಭಗವಂತನನ್ನು ಬಾರಿ ಬಾರಿಗೂ ಪ್ರಾರ್ಥನೆ ಮಾಡುತ್ತಾ ನಡೆದನು. ದೂರದಿಂದಲೇ ಕಾಣಿಸುತ್ತಿದ್ದ ಹಂಪಸಮುದ್ರವನ್ನು ಸೇರಲು ಸುಂದರಶರ್ಮ ತನ್ನ ವೇಗವನ್ನು ಇಮ್ಮಡಿಸಿದನು. ಎಡಗಣ್ಣು ಹಾರುತ್ತಿತ್ತು. ಊರೊಳಗಿನಿಂದ ರೋದನ ಧ್ವನಿಯು ಕೇಳಿಸಿತು. ನಾಯಿಗಳು ವಿಕಾರವಾಗಿ ಬೊಗಳುತ್ತಿದ್ದವು. ಈ ಎಲ್ಲ ದುಷ್ಶಕುನಗಳನ್ನು ಈಕ್ಷಿಸುತ್ತಾ ಮನೆಯನ್ನು ಸಮೀಪಿಸಿದನು. ತನ್ನ ಮನೆಯ ಮುಂದೆ ಇರುವ ದೃಶ್ಯವನ್ನು ನೋಡಿ ಸ್ತಬ್ಧನಾದನು. ಹೃದಯವು ಕರಗಿ ನೀರಾಯಿತು. ಮರಣಾಸನ್ನರಾದ ಪುತ್ರಿಯರನ್ನು ಪರೀಕ್ಷಿಸುತ್ತಾ ಜ್ಞಾನಾಂಬ ಶೋಕಮಗ್ನಳಾಗಿದ್ದಳು. ತಾನು ತಂದಿದ್ದ ಸ್ವಯಂಪಾಕದ ಗಂಟನ್ನು ಒಂದು ಕಡೆ ಬಿಸಾಡಿ ಕಾರತವಾಗಿ ಮಕ್ಕಳನ್ನು ಸಮೀಪಿಸಿದನು. ತಂದೆಯು ಸಮೀಪಕ್ಕೆ ಬರುತ್ತಲೇ ಸಾವನ್ನೇ ಎದುರು ನೋಡುತ್ತಿದ್ದ ಮಂಗಮ್ಮ–ಲಕ್ಷ್ಮೀದೇವಿಯರು ತಮ್ಮ ಅಂತಿಮ ಇಚ್ಛೆಯು ಪೂರ್ತಿಯಾಯಿತೆಂಬಂತೆ ತಂದೆಯನ್ನು ಕಣ್ಣಾ ತುಂಬ ನೋಡಿದರು. ಹಾಗೆ ನೋಡುತ್ತಿರುವಂತೆಯೇ ಮೃತ್ಯು ದೇವತೆಯು ಅವರಿಬ್ಬರನ್ನು ತನ್ನ ಲೋಕಕ್ಕೆ ಕರೆದುಕೊಂಡು ಹೋಯಿತು. ಜ್ಞಾನಾಂಬ ತನ್ನ ಎದೆಯನ್ನು ಬಡಿದುಕೊಳ್ಳುತ್ತಾ ಗಟ್ಟಿಯಾಗಿ ರೋದಿಸತೊಡಗಿದಳು. ಸುತ್ತ ಮುತ್ತಲಿನ ವಾತಾವರಣವೆಲ್ಲವೂ ಶೋಕಮಯವಾಯಿತು. ಹೃದಯ ವಿದಾರಕ ದೃಶ್ಯವನ್ನು ನೋಡಿ ಹಂಪಸಮುದ್ರದ ಜನವೆಲ್ಲ ಕಳಕಳಿಯಾದರು. ಅಕ್ಕಪಕ್ಕದ ಹೆಂಗಸರು ಬಂದು ಜ್ಞಾನಾಂಬಳನ್ನು ಬಹುವಾಗಿ ಸಮಾಧಾನ ಮಾಡಲು ಪ್ರಯತ್ನಿಸಿದರು. ಆದರೆ ಮಾತೃ ಹೃದಯಕ್ಕೆ ಸ್ವಲ್ಪವೂ ಸಮಾಧಾನ ಸಿಗಲಿಲ್ಲ. ಸುಂದರಶರ್ಮ ಉಕ್ಕಿ ಉಕ್ಕಿ ಬರುವ ದುಃಖವನ್ನು ನುಂಗಿಕೊಂಡು ಊರ ಜನರ ಸಹಕಾರಗಳಿಂದ ತನ್ನ ಪುತ್ರಿಯರ ಅಂತ್ಯಕ್ರಿಯೆಗಳನ್ನು ಮಾಡಿ, ಸ್ನಾನಾದಿಗಳನ್ನು ತೀರಿಸಿಕೊಂಡು ಮನೆಗೆ ಬಂದನು. ನೆರೆಹೊರೆಯ ಜನ ಜ್ಞಾನಾಂಬಳಿಗೆ ಸ್ನಾನ ಮಾಡಿಸಿ ಊಟವನ್ನು ತಂದು ಇಟ್ಟರು. ಆ ವೇಳೆಗೆ ಸಂಜೆಯಾಗಿತ್ತು. ಪತಿಯು ಮನೆಯ ಒಳಗೆ ಪ್ರವೇಶ ಮಾಡುತ್ತಲೇ ಆತನನ್ನು

ನೋಡಿ ಜ್ಞಾನಾಂಬಳ ದುಃಖವು ಇಮ್ಮಡಿಸಿತು. ಗಟ್ಟಿಯಾಗಿ ವಿಲಾಪಮಾಡಿ ಅತ್ತಳು. ಸುಂದರಶರ್ಮನೂ ಕಣ್ಣೀರು ಹಾಕಿದನು. ಸರ್ವವೂ ಭಗವಂತನ ಲೀಲೆ ಎಂದುಕೊಂಡು ಧೈರ್ಯಮಾಡಿಕೊಂಡನು. ಆದರೂ ಪತ್ನಿಯನ್ನು ಮಾತ್ರ ಸಮಾಧಾನ ಪಡಿಸಲಾರದಾದನು. ನೆರೆಯವರು ತಂದಿಟ್ಟ ಊಟ ಹಾಗೆಯೇ ಇತ್ತು. ಪತಿ-ಪತ್ನಿಯರಿಬ್ಬರೂ ದುಃಖಪರವಶರಾಗಿ ಚಿಂತಾಕ್ರಾಂತರಾಗಿ ಮೌನವಾಗಿ ಕುಳಿತರು.

ಕತ್ತಲಾಗ ತೊಡಗಿತು. ಇಂದಿನ ನಾಟಕವಿಷ್ಟೇ ಎಂಬಂತೆ ಹೊಲಗಳಲ್ಲಿ ಕೆಲಸಮಾಡುತ್ತಿದ್ದ ರೈತರು ತಮ್ಮ ಕೆಲಸವನ್ನು ಅಲ್ಲಿಗಲ್ಲಿಗೇ ಮುಗಿಸಿ, ತಮ್ಮ ಪಶುಗಳನ್ನೂ, ಕೆಲಸಮುಟ್ಟುಗಳನ್ನೂ ತೆಗೆದುಕೊಂಡು ಮನೆಗಳಿಗೆ ಹೊರಟರು. ಬೀದಿಯ ಮಕ್ಕಳು ತಮ್ಮ ಆಟಪಾಟಗಳನ್ನು ಸಾಕು ಮಾಡಿಕೊಂಡು ಮನೆಗಳನ್ನು ಸೇರಿಕೊಂಡರು. ದೀಪಗಳನ್ನು ಬೆಳಗಿಸಿದರು. ಹೆಂಗಸರು ಅಲಂಕರಿಸಿಕೊಂಡು, ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ನಿಶಾರಾಣಿಯು ತನ್ನ ಕಪ್ಪಾದ ಕೂದಲನ್ನು ಕೆದರಿಕೊಂಡು ನಕ್ಷತ್ರಗಳೆಂಬ ಸೀರೆಯನ್ನು ಧರಿಸಿ ಬಂದಳೋ ಎಂಬಂತೆ ಅಂಧಕಾರವು ಆವರಿಸಿತು.

ಸುಂದರಶರ್ಮನ ಮನೆಯಲ್ಲಿ ಮಾತ್ರ ದೀಪವಿರಲಿಲ್ಲ. ಪತಿಪತ್ನಿಯರು ಆಲೋಚನಾ ಮಗ್ನರಾಗಿಯೇ ಇದ್ದರು. ಇಷ್ಟರಲ್ಲಿ ಯಾವುದೋ ತಟ್ಟಿಯೊಂದು ಸುಂದರಶರ್ಮ ಜ್ಞಾನಾಂಬರ ಮೌನವನ್ನು ಭಂಗ ಮಾಡಲು, ಬಾರಿಸಿದ ಗಂಟೆಯೋ ಎಂಬಂತೆ ಕೆಳಗೆಬಿದ್ದ ಶಬ್ದವಾಯಿತು. ಜ್ಞಾನಾಂಬ ಮೆಲ್ಲಗೆ ಎದ್ದು ತೂರಾಡುತ್ತಾ ಹೋಗಿ ದೀಪವನ್ನು ಬೆಳಗಿಸಿದಳು. ನೆರೆಮನೆಯವರು ತಂದಿಟ್ಟಿದ್ದ ಅನ್ನವನ್ನು ನಾಯಿಗಳೆರಡು ತಿನ್ನುತ್ತಿದ್ದುವು, ಆ ನಾಯಿಗಳೇ ಅನ್ನದ ಮೇಲಿನ ಮುಚ್ಚಳಗಳನ್ನು ಕೆಳಗೆ ತಳ್ಳಿ ಶಬ್ದ ಮಾಡಿದ್ದುವು. ದೀಪದ ಬೆಳಕಿನಲ್ಲಿ ನಮ್ಮ ಕೆಲಸ ಸಾಗುವುದಿಲ್ಲವೆಂಬಂತೆ ತಿನ್ನುತ್ತಿದ್ದ ಅನ್ನವನ್ನು ಬಿಟ್ಟು ನಾಯಿಗಳು ಬೀದಿಗೆ ಓಡಿ ಹೋದವು. ಜ್ಞಾನಾಂಬ ನಿಧಾನವಾಗಿ ಹೋಗಿ ಬಾಗಿಲು ಮುಚ್ಚಿ ಬಂದಳು. ಸುಂದರಶರ್ಮ ಇದೆಲ್ಲ ಗಮನಿಸುತ್ತಿದ್ದರೂ ಏನೂ ತಿಳಿಯದವನಂತೆ ಮೌನವಾಗಿಯೇ ಕುಳಿತಿದ್ದನು. ಜ್ಞಾನಾಂಬ, ಪತಿಯನ್ನು ಸಮೀಪಿಸಿ ಕಣ್ಣೀರು ಹಾಕಿದಳು. ಸುಂದರಶರ್ಮ ಆಕೆಯನ್ನು ಕೈಹಿಡಿದು ಹತ್ತಿರ ಕೂಡಿಸಿಕೊಂಡು ಅಯ್ಯೋ ಹುಚ್ಚಿ, ಇದೆಲ್ಲ ಭ್ರಾಂತಿ ಜನ್ಮತಾಳಿದ ಪ್ರತಿಪ್ರಾಣಿಯಿಂದೂ

ಅರುಣೋದಯವಾಗುವವರೆಗೆ ಸಮಯವನ್ನು ಕಳೆದರು. ಬ್ರಾಹ್ಮೀಮುಹೂರ್ತವು ಬರುತ್ತಿದ್ದಹಾಗೆಯೇ, ದೇವರ ಪೆಟ್ಟಿಗೆಯನ್ನೂ, ಕಟ್ಟಿಟ್ಟಿದ್ದ ಅಲ್ಪಸ್ವಲ್ಪ ಸಾಮಾನುಗಳ ಗಂಟನ್ನೂ ಇಬ್ಬರೂ ಒಂದೊಂದನ್ನು ಕೈಯಲ್ಲಿ ಹಿಡಿದು ಹಂಪಸಮುದ್ರವನ್ನು ಬಿಟ್ಟು ಕೂರ್ಮಗಿರಿಯ ಕಡೆಗೆ ಪ್ರಯಾಣ ಮಾಡಿದರು.

ಸೂರ್ಯೋದಯವಾದ ಸ್ವಲ್ಪವೇ ಸಮಯಕ್ಕೆ ಸುಂದರಶರ್ಮ ಜ್ಞಾನಾಂಬರು ಕೂರ್ಮಗಿರಿಯ ಪ್ರಾಂತದ ಕಾನನವನ್ನು ಸೇರಿದರು. ಕಾಡಿನ ದಾರಿಯಲ್ಲಿ ನಡೆದು ಅಭ್ಯಾಸವಿಲ್ಲದ ಜ್ಞಾನಾಂಬೆಯ ಕಾಲುಗಳಲ್ಲಿ ಮುಳ್ಳುಗಳು ಚುಚ್ಚಿಕೊಂಡಿವೆ. ಕಲ್ಲಿನ ಚೂರುಗಳು ತಗಲಿ ಕಾಲ ಬೆರಳುಗಳಿಂದ ರಕ್ತ ಹರಿಯ ತೊಡಗಿತು. ನೋಡುವುದಕ್ಕೆ ಬೆರಳುಗಳಿಗೆ ಗೋರಂಟಿ ಬಣ್ಣವೇನಾದರೂ ಹಚ್ಚಿದೆಯೋ ಎಂಬಂತೆ ಬೆರಳುಗಳು ರಕ್ತದಿಂದ ಕೆಂಪಾಗಿ ತೋರುತ್ತಿದ್ದವು. ನಿದ್ರಾಹಾರಗಳೇ ಇಲ್ಲದೆ ದುಃಖಾಗ್ನಿಯಲ್ಲಿ ಬೆಂದು ಹೋಗಿ ಕೃಶವಾದ ಶರೀರ. ಗುಣಿಬಿದ್ದು ಒಳಗೆ ಹೋಗಿರುವ ಆಕೆಯ ಕಣ್ಣುಗಳೂ ಹೊರಗಿನ ಬೆಳಕನ್ನು ನೋಡಲು ಹೆದರಿ ಒಳಗೇ ಹೋಗಿವೆಯೆಂಬಂತೆ ತೋರುತ್ತಿದ್ದವು. ಎಣ್ಣೆ ಬಾಚಣಿಗೆಗಳನ್ನು ಕಾಣದೆ ಬಿಚ್ಚಿಹೋಗಿದ್ದ ಜಡೆ ಮಕ್ಕಳನ್ನು ಕಳೆದು ಕೊಂಡಿದ್ದರಿಂದ ಉಂಟಾದ ಶೋಕಪೂರಿತ ಹೃದಯ, ನಡೆಯಲಾರದೆ ಹೆಜ್ಜೆಗಳು ತಪ್ಪಿ ಹೋಗುತ್ತಿವೆ. ಬಳಲಿ ಬೆಂಡಾಗಿ ಪತಿಯ ಭುಜದ ಮೇಲೆ ತಲೆಯಿಟ್ಟುಕೊಂಡು ಆತನನ್ನೇ ಆಧಾರವಾಗಿ ಮಾಡಿಕೊಂಡು ಮೆಲ್ಲನೆ ನಡೆಯುತ್ತಿದ್ದಳು. ಸುಂದರಶರ್ಮ ದೇವರನಾಮ ಸ್ಮರಣೆ ಮಾಡುತ್ತಾ ಪತ್ನಿಯ ಸೊಂಟಕ್ಕೆ ಸುತ್ತಲೂ ತನ್ನ ಕೈಯನ್ನು ಇಟ್ಟುಕೊಂಡು ನಡೆಸಿಕೊಂಡು ಹೊರಟನು. ಹಂಪ ಸಮುದ್ರದಿಂದ ಬೆಟ್ಟದ ಹತ್ತಿರಕ್ಕೆ ನಡೆಯ ಬೇಕಾಗಿದ್ದ ನಾಲ್ಕು ಮೈಲಿಗಳ ದೂರವೇ ಅವರಿಗೆ ನಲವತ್ತು ಮೈಲಿಗಳಷ್ಟು ಕಂಡಿತು. ನಿಧಾನವಾಗಿ ಅಂತೂ ಕೂರ್ಮಗಿರಿಯನ್ನು ಸಮೀಪಿಸಿದರು. ಗಿರಿಯ ಬಂಡೆಗಳ ಮೇಲೆ ಸ್ವಲ್ಪ ವಿಶ್ರಮಿಸಿಕೊಂಡದ್ದೂ ಆಯಿತು. ಇನ್ನು ಬೆಟ್ಟವನ್ನು ಹತ್ತಿ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ಉದ್ಭವ ಶಿಲಾ ಮೂರ್ತಿಯನ್ನು ಹುಡುಕಬೇಕು. ಜ್ಞಾನಾಂಬ ಒಂದುಸಲ ತಲೆ ಮೇಲೆತ್ತಿ ಗಿರಿಯನ್ನು ನೋಡಿದಳು. ಆಕೆಗೆ ಅದು ಒಂದು ಮಹಾಪರ್ವತದಂತೆ ತೋರಿತು. "ಏನು ಸ್ವಾಮಿ, ಈ ಬೆಟ್ಟವನ್ನು ನಾನು ಹತ್ತಲಾರೆ. ಈ ಬೆಟ್ಟದ ಬಂಡೆಗುಂಡುಗಳಲ್ಲಿ ಆ ಸ್ವಾಮಿಯನ್ನು ಎಲ್ಲಿರುವನೆಂದು ಹೇಗೆ ಹುಡುಕುವುದು? ಎಂದಳು ದೀನ ಸ್ವರದಲ್ಲಿ ಜ್ಞಾನಾಂಬ. "ಜ್ಞಾನಾ, ಏಕೆ ಅಧೀರಳಾಗುತ್ತಿ! ಇಷ್ಟೂ ದೂರ ಬಂದೆ ಇನ್ನೆಷ್ಟು

ಯೋಚನೆ ಮಾಡೋಣ. ಅದುವರೆಗೆ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ನಾಮಸ್ಮರಣೆ ಮಾಡುತ್ತಾ ಮುಂದೆ ನಡೆ" ಎಂದು ಸುಂದರಶರ್ಮ ಸಮಾಧಾನ ಹೇಳಿದನು. ಮೆಲ್ಲ ಮೆಲ್ಲಗೆ ಹೆಜ್ಜೆ ಮುಂದೆ ಮುಂದೆ ಹಾಕುತ್ತಾ ಕೂರ್ಮಗಿರಿಯನ್ನು ಹತ್ತಲು ತೊಡಗಿದರು. ಕೂರ್ಮಗಿರಿಯ ಮೇಲ್ಭಾಗಕ್ಕೆ ಹೋಗುವ ವೇಳೆಗೆ ಮಧ್ಯಾಹ್ನವಾಯಿತು. ಪ್ರತಿ ಕಲ್ಲೂ ಪ್ರತಿಮರ, ಪ್ರತಿಯೊಂದು ಪುತ್ತ ಎಲ್ಲ ಕಡೆಯಲ್ಲೂ ಹುಡುಕಿದರು. ಆದರೆ ಅವರಿಗೆ ಸ್ವಾಮಿಯ ಮೂರ್ತಿಯು ಕಾಣಿಸಿಗಲಿಲ್ಲ. ಹುಡುಕಿ, ಹುಡುಕಿ ಬಳಲಿ ಹೋದರು. "ಓ ಸ್ವಾಮಿ, ಆದಿನಾರಾಯಣ, ಎಲ್ಲಿರುವೆಯಪ್ಪ, ಪ್ರಭುವೆ! ಭಕ್ತವತ್ಸಲ! ಗಜೇಂದ್ರನನ್ನು ರಕ್ಷಿಸಿದ ನೀನು ನಮ್ಮನ್ನು ಸಂರಕ್ಷಿಸಲು ಬರಲಿಲ್ಲವೇಕೆ? ಆಶ್ರಿತ ಜನ ಕಲ್ಪತರುವೇ! ದೀನ ಜನ ಪರಿಪಾಲಕಾ! ಪಾಹಿ.ನಿಮ್ಮ ಉದ್ಭವ ಶಿಲಾ ಮೂರ್ತಿಯನ್ನು ತೋರಿಸಿ ಕೃಪೆಮಾಡು ತಂದೆ! ಎಂದು ಬಗೆಬಗೆಯಾಗಿ ಸುತ್ತಿಸಿದರು. ಪ್ರಲಾಪಿಸಿದರು. "ಸ್ವಾಮಿ, ಆದಿನಾರಾಯಣಾ" ಎಂದು ಗಟ್ಟಿಯಾಗಿ ಕೂಗಿದರು. ಬೆಟ್ಟವೆಲ್ಲ ಇವರ ಕೂಗುಗಳಿಗೆ ಮಾರುದನಿ ಕೊಟ್ಟಿತು. ಆದರೆ, ಅವರ ಕೂಗುಗಳೆಲ್ಲ ಅರಣ್ಯ ರೋದನವೇ ಆಯಿತು. ವ್ಯರ್ಥವಾಯಿತು. ಕಡೆಗೆ "ಸ್ವಾಮಿ, ನಿನ್ನ ಶಿಲಾಮೂರ್ತಿಯು ನಮಗೆ ಕಾಣಿಸದೆ ಹೋದರೆ, ನಾವು ಇಲ್ಲಿಯೇ ಪ್ರಾಣತ್ಯಾಗ ಮಾಡುತ್ತೇವೆ. ಇನ್ನು ಹುಡುಕುವುದು ನಮ್ಮಿಂದಾಗದು" ಎಂದು ಹಠಮಾಡಿ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ತಮ್ಮ ಹೃದಯ ಪೀಠಗಳ ಮೇಲೆ ಪ್ರತಿಷ್ಠಿಸಿಕೊಂಡು ಆ ವಿಪ್ರದಂಪತಿಗಳು ಅದೆಷ್ಟು ಹೊತ್ತು ಕುಳಿತರೋ ಅವರಿಗೆ ಸಮಯವೇ ತಿಳಿಯಲಿಲ್ಲ.

ಬಹು ಸಮಯದ ನಂತರ ಯೋಗಸಿದ್ಧಿಯಿಂದ ಆ ಗಿರಿಯಲ್ಲಿ ಲೋಕ ದೃಷ್ಟಿಗೆ ಅದೃಶ್ಯರಾಗಿದ್ದ ಕೂರ್ಮ ಮಹಾಮುನಿಯು ಆ ದಂಪತಿಗಳ ಎದುರಿಗೆ ಬಂದು ನಿಂತರು. ಮುಖದಲ್ಲಿ ಮಂದಹಾಸವು ತುಳುಕುತ್ತಿದೆ. ತಪಸ್ಸಿನ ತೇಜಸ್ಸೇ ಆಕೃತಿ ತಾಳಿದಂತಿದೆ. ಬೆಳದಿರುವ ನೀಳವಾದ ಗಡ್ಡವು ರಜತ ಎಳೆಗಳ ಸಮೂಹದಂತೆ ಹೊಳೆಯುತ್ತಿದೆ. ನೆರೆತು ಬೆಳ್ಳಗಾದ ಕೂದಲಿನ ಜಡೆಗಳು, ಕಂಕಳಲ್ಲಿ ಯೋಗದಂಡ, ಒಂದು ಕೈಯಲ್ಲಿ ಕಮಂಡಲು ಮತ್ತೊಂದು ಕೈಯಲ್ಲಿ ರುದ್ರಾಕ್ಷಿಮಾಲೆ, ಹಣೆಯಮೇಲೆ ವಿಭೂತಿಯ ಪಟ್ಟೆಗಳು–ಇಂತಹ ದಿವ್ಯ ವಿಗ್ರಹವನ್ನು ಸಂದರ್ಶಿಸಿ, ಬ್ರಾಹ್ಮಣ ದಂಪತಿಗಳ ಹೃದಯಾಂತರಾಳದಲ್ಲಿ ದಿವ್ಯ ತೇಜಸ್ಸೊಂದು ಮಿರುಗಿದಂತಾಯಿತು. ಆಶ್ಚರ್ಯ ಭಯಗಳು ಏಕ ಕಾಲದಲ್ಲಿ ಉಂಟಾದವು. ಇಬ್ಬರೂ ಏಕ ಕಾಲದಲ್ಲಿ

ಕಣ್ತೆರೆದು ನೋಡಿದರು, ಎದುರಿಗೇ ನಿಂತಿದ್ದ ತಪೋನಿಧಿಯಾದ ಕೂರ್ಮ ಮಹಾಮುನಿಯ ಪಾದ ಪಯೋಜಗಳಿಗೆ ಸಾಷ್ಟಾಂಗವೆರಗಿದರು. ಮುನಿವರನು ಸಂತೋಷಾಂತರಂಗನಾಗಿ ಆ ದಂಪತಿಗಳನ್ನು ಮೇಲಕ್ಕೆ ಎಬ್ಬಿಸಿ "ಅಯ್ಯಾ ನೀವು ಅತ್ಯಂತ ಭಾಗ್ಯವಂತರು. ಆ ಸ್ವಾಮಿಯೇ ನಿಮ್ಮನ್ನು ಇಲ್ಲಿಗೆ ಬರುವಂತೆ ವಾಡಿದ್ದಾನೆ. ಇಲ್ಲಿಗೆ ಸಮೀಪದಲ್ಲಿಂಯೇ ಒಂದು ಗುಹೆಯಲ್ಲಿ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ಉದ್ಭವ ಶಿಲಾಮೂರ್ತಿಯು ರಾರಾಜಿಸುತ್ತಿದೆ. ನೀವು ಆ ಮೂರ್ತಿಯನ್ನು ಪೂಜಿಸಿ" ಎಂದು ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ, ದೇವರಿದ್ದ ಗುಹೆಯನ್ನು ಪ್ರವೇಶಿಸಿ ಶ್ರೀಲಕ್ಷ್ಮೀ ಆದಿನಾರಾಯಣ ಸ್ವಾಮಿಯ ಉದ್ಭವ ಶಿಲಾಮೂರ್ತಿಯ ದರ್ಶನ ಮಾಡಿಸಿದನು. ಅವರು, ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ಉದ್ಭವ ಶಿಲಾಮೂರ್ತಿಯನ್ನು ಸಂದರ್ಶಿಸಿ ಭಕ್ತಿಭಾವದಲ್ಲಿ ನಿಮಗ್ನರಾಗಿ ಆದಿನಾರಾಯಣಾ, ದೀನ ಬಂಧೋ ಸೃಷ್ಟಿ ಸ್ಥಿತಿಲಯಕಾರಣಾ, ನಾರಾಯಣಾ, ಇಷ್ಟು ದಿನಗಳಿಗೆ ನಿನ್ನ ಸನ್ನಿಧಿಗೆ ಬರಬಲ್ಲವರಾದೆವು. ಸ್ವಾಮಿ, ಇನ್ನು ನಿನ್ನನ್ನು ಬಿಡೆವು. ನಿನ್ನ ಸೇವೆ ಮಾಡುತ್ತಾ ನಿನ್ನ ಆಶ್ರಯದಲ್ಲಿಯೇ ನಮ್ಮ ಜೀವನದ ದಿನಗಳನ್ನ ಇಲ್ಲಿಯೇ ಕಳೆಯುತ್ತೇವೆ ಎಂದು ವಿಧವಿಧವಾಗಿ ಪ್ರಾರ್ಥಿಸಿಕೊಂಡರು. ಈ ರೀತಿ ನೈಜಭಕ್ತಿಮಗ್ನರಾದ ಅವರನ್ನು ಆನಂದ ಪುಲಕಾಂಕಿತನಾಗಿ ಕೂರ್ಮ ಮಹಾಮುನಿಯು "ಭಕ್ತಾಗ್ರಣಿಗಳೇ, ಇದು ಮಾಘಮಾಸ, ಶುಭದಿನದಿಂದ ಯುಕ್ತವಾದ ರವಿವಾರ, ಈ ದಿನದಿಂದಲೇ ನೀವು ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಆರಾಧಿಸಿ. ನಿಮ್ಮ ಕಷ್ಟ-ಕಾರ್ಪಣ್ಯಗಳು ದೂರವಾಗಿ ಮನೋರಥಗಳು ಸಫಲವಾಗುತ್ತವೆ. ಮುಕ್ತಿಯನ್ನು ಪಡೆಯುತ್ತೀರಿ" ಎಂದು ಆಶೀರ್ವದಿಸಿ ಅಂತರ್ಧಾನವಾದನು.

ಋಷಿವರೇಣ್ಯನ ಆದೇಶಾನುಸಾರ ಸುಂದರಶರ್ಮ ಅಂದಿನಿಂದಲೇ ಉದ್ಭವ ಶಿಲಾಮೂರ್ತಿಯ ರೂಪದಲ್ಲಿಯ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಪೂಜಿಸುತ್ತಾ ಅರ್ಚಕರಾಗಿ ಈ ಗಿರಿಗೆ ಸಮೀಪದಲ್ಲಿಯೇ ಇರುವ "ಎಲವಲೋಡು" ಗ್ರಾಮದಲ್ಲಿ ಪತ್ನಿಯೊಡನೆ ವಾಸಿಸುತ್ತಾ ಕಾಲಯಾಪನೆ ಮಾಡತೊಡಗಿದನು.

ಮಹಾತಪಸ್ವಿ ಶ್ರೀಲಕ್ಷ್ಮೀಆದಿನಾರಾಯಣಸ್ವಾಮಿಯ ಕ್ಷೇತ್ರವನ್ನು ತೋರಿಸಿಕೊಟ್ಟನಂತೆ.

7

"ಮಳ್ಳಿನ ಯಾತ್ರೆಗಾಯಿಂತ ತತ್ತಿಸಿಕ್ಕಾಮಿ ನಾಂದ"

ಒಂದು ಭಾನುವಾರ ಸುಂದರಶರ್ಮ ಸ್ನಾನವಾಗಿ ಮಡಿವಸ್ತ್ರಗಳನ್ನು ಧರಿಸಿ ವಿಭೂತಿಯ ತ್ರಿಪುಂಡ್ರಗಳನ್ನು ಇಟ್ಟುಕೊಂಡು ಸಂಧ್ಯಾವಂದನೆಯಲ್ಲಿ ತೊಡಗಿದ್ದ. ಒಂದು ಕೈಯಲ್ಲಿ ಜಲಕಲಶವನ್ನು ಮತ್ತೊಂದು ಕೈಯಲ್ಲಿ ಪೂಜಾ ಪರಿಕರಗಳ ಚೀಲವನ್ನೂ ಹಿಡಿದು ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ನಾಮ ಮಂತ್ರವನ್ನು ಜಪಿಸುತ್ತಾ ಶ್ರೀ ಕೂರ್ಮಗಿರಿಯ ಕಡೆಗೆ ಪ್ರಯಾಣ ಮಾಡಿದನು. ದಾರಿಯಲ್ಲಿ ಯಥಾಪ್ರಕಾರವೆಲ್ಲವೂ ಎದುರಾದವು. ಸುಂದರಶರ್ಮನನ್ನು ನೋಡಿ ಸಮಸ್ಕರಿಸಿ "ಸ್ವಾಮಿ, ಪ್ರತಿವಾರವೂ ತಾವು ಪೂಜಾ ಸಾಮಗ್ರಿಗಳೊಡನೆ ಬೆಟ್ಟದ ಕಡೆ ಹೋಗುತ್ತಿರುತ್ತೀರಿ. ಅಲ್ಲಿ ಯಾವ ದೇವರಿದೆ? ಎಲ್ಲಿದೆ? ನನಗೂ ತೋರಿಸಿ, ದಯ್ಯಾ ಇಸ್ಕೊಳ್ಳಿ" ಎಂದು ವಿನಯವಾಗಿ ಕೇಳಿದನು. ಸುಂದರಶರ್ಮ ಮಂದಹಾಸ ಮಾಡುತ್ತಾ "ಅಯ್ಯಾ ಇಲ್ಲಿಯೇ ಬೆಟ್ಟದ ಮೇಲೆ ಒಂದು ಗುಹೆಯಲ್ಲಿ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿ, ಶಿಲಾ ರೂಪದಲ್ಲಿ ಅವತಾರ ಮಾಡಿದ್ದಾನೆ. ಅವನು ಭಕ್ತರ ಕಲ್ಪವೃಕ್ಷವೇ ಹೌದು. ಅವನನ್ನು ಪೂಜಿಸುವುದಕ್ಕಾಗಿಯೇ ನಾನು ಹೋಗುತ್ತಿದ್ದೇನೆ. ಅವಕಾಶ ತೋರಿದಾಗ ನೀವೂ ಬಂದು ಸ್ವಾಮಿಯ ದರ್ಶನಮಾಡಿ ಅನುಗ್ರಹವನ್ನು ಹೊಂದಬಹುದು" ಎಂದು ಎಳ್ಳಪ್ಪರೆಡ್ಡಿಗೆ ಸಮಾಧಾನ ಹೇಳಿ ಸುಂದರಶರ್ಮ ತನ್ನ ದಾರಿ ಹಿಡಿದು ಹೊರಟು ಹೋದನು.

ಎಂದೂ ಕಂಡು, ಕೇಳಿ, ಅರಿಯದ ಈ ಆಶ್ಚರ್ಯಕರವಾದ ಮಾತು ಎಳ್ಳಪ್ಪರೆಡ್ಡಿಯ ಹೃದಯಾಂತರಾಳದಲ್ಲಿ ಕುತೂಹಲವನ್ನು ಉಂಟು ಮಾಡಿತು. ಶ್ರೀ ಕೂರ್ಮಗಿರಿಯನ್ನು ಆರೋಹಣ ಮಾಡಿ, ಉದ್ಭವ ಶಿಲಾ ಮೂರ್ತಿಯ ರೂಪದಲ್ಲಿ ಅವತರಿಸಿರುವ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಸಂದರ್ಶಿಸಿ ಧನ್ಯನಾಗಲೇಬೇಕೆಂಬ ಆಕಾಂಕ್ಷೆ ಅವನಿಗೆ ತೀವ್ರವಾಯಿತು. ಮಾರನೆಯ ಭಾನುವಾರವೇ ಹೊರಡಲು ಅನುವಾದನು. ತನ್ನ ಕುಟುಂಬ ಪರಿವಾರ ಬಂಧು ಮಿತ್ರರೆಲ್ಲರನ್ನೂ ಪ್ರಯಾಣಕ್ಕೆ ಪ್ರೇರಿಸಿದನು. ಅಂದು ಎಲ್ಲರೂ ಸ್ನಾನಾದಿಗಳಿಂದ ಪವಿತ್ರೋತ್ಕರಾಗಿ ಒಳೆದ ಮಡಿಗಳನ್ನು ಧರಿಸಿ, ಪೂಜಾ ದ್ರವ್ಯಗಳೊಡನೆ ಶ್ರೀಸ್ವಾಮಿ

ಅಭಿಮಾನದ ಅರ್ಥವನ್ನು ನಾಶಮಾಡಿ, ಭಕ್ತರು ತಂದಿಟ್ಟ ಫಲಗಳನ್ನು ದೇವರಿಗೆ ಸಮರ್ಪಿಸಿ, ತಾಂಬೂಲದ ಬೆಳಗಿ ಎಲ್ಲರಿಗೂ ಆರತಿಯನ್ನು ತೆಗೆದುಕೊಳ್ಳಲು ಕೊಟ್ಟನು. ಬಂದಿದ್ದವರು ಒಬ್ಬೊಬ್ಬರಾಗಿ ಬಂದು ಗಣಾಧೀಶ ಅಭಿನವ ಶಿವಯೋಗಿಯ ಪಾದಾರವಿಂದಗಳಿಗೆ ನಮಸ್ಕರಿಸಿ ಪ್ರಸಾದವನ್ನು ಸ್ವೀಕರಿಸುವರು. ಎಲ್ಲರಿಗಿಂತ ಕಡೆ ಮೊದಲು ವಜ್ರನಾಥನಿಗೆ ಬಂದು ನಮಸ್ಕರಿಸಿ, ಮಲ್ಲಿಕಾರ್ಜುನಯ್ಯನಿಗೆ "ಸ್ವಾಮಿ ನೀನು ಫಲ್ಗುನಿಗಿಂತ ಶೂರ, ಬಹುಶಾಲಿಯಿಂದ ನನಗೆ ಸಂತಸವಿಲ್ಲ. ನನಗೊಬ್ಬ ಪುತ್ರನನ್ನು ಕರುಣಿಸು. ನಿನ್ನನ್ನೇ ನನ್ನ ಗೃಹದೇವತೆಯೆಂದು ಭಾವಿಸುತ್ತೇನೆ. ಪ್ರತಿವರ್ಷವೂ ದೀಪೋತ್ಸವವನ್ನು ಮಾಡಿಸುತ್ತೇನೆ" ಎಂದು ಪ್ರಾರ್ಥಿಸಿ ಕೊಂಡನು. ನಂತರ, ಸ್ವಾಮಿಯು ಗುಣ ದೋಷ-ದೈವದ ವಿಶೇಷಗಳನ್ನು ಸ್ಥಾಪಿಸಿ ಎಲ್ಲರೂ ಬೆಟ್ಟದಿಂದ ಇಳಿದು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಇದಕ್ಕೆ ಬಿಟ್ಟ ಹಸ್ತ ಇವರ ದಾರಿಯೇ ಇಂದಿಗೂ ಒಂದು ಮಾರ್ಗವಾಗಿ ಪರಿಣಮಿಸಿದೆ ಎನ್ನಬಹುದಷ್ಟೆ. ಸುಂದರಶರ್ಮನಿಗೆ ದಕ್ಷಿಣಾತಾಂಬೂಲ ಸಹಿತ ಸೌಮಂಡಲ ಸಮಗ್ರವನ್ನು ದಾನಮಾಡಿ, ಸಜ್ಜನಿಕ, ಅಂದು ತನ್ನೊಡನೆ ಬಂದಿದ್ದ ಇಷ್ಟಮಿತ್ರ ಬಂಧು ಪರಿವಾರದವರಿಗೆ, ಮೃಷ್ಟಾನ್ನ ಭೋಜನ ಮಾಡಿಸಿ, ಸಂತೋಷಪಡಿಸಿದನು.

ದೇವರನ್ನು ಪ್ರಾರ್ಥಿಸಿ, ಸಂತತಿಯನ್ನು ಬೇಡಿ ವರ್ಷಕಳೆಯುವುದರೊಳಗಾಗಿ ಸ್ವಾಮಿಯ ಕೃಪೆಯಿಂದ ಎರ್ರಪ್ಪರೆಡ್ಡಿಯ ಪತ್ನಿಯು ಪುರುಷ ಶಿಶುವಿಗೆ ಜನ್ಮವಿತ್ತಳು. ಎರ್ರಪ್ಪರೆಡ್ಡಿಯ ಆನಂದಕ್ಕೆ ಪಾರವೇ ಇಲ್ಲ. ಬಂಧುಮಿತ್ರರನ್ನೆಲ್ಲಾ ಆಹ್ವಾನಿಸಿದನು. ಎಲ್ಲರೂ ಮಂಗಳ ಸ್ನಾನ ಮಾಡಿದರು. ಎಲ್ಲರೂ ಮನೆಗಳನ್ನು ಸಾರಿಸಿ, ರಂಗೋಲಿಗಳನ್ನು ಇಟ್ಟು, ಹಸಿರುತೋರಣಗಳನ್ನು ಕಟ್ಟಿ ಅಲಂಕರಿಸಿದರು. ಎಲವಲೋಡು ಗ್ರಾಮ, ಅಂದು ನೂತನ ವೈಭವದಿಂದ ಮೆರೆಯಿತು. ಸ್ತ್ರೀಯರು, ರೇಷ್ಮೆಯ ಸೀರೆಗಳನ್ನು ಉಟ್ಟು, ಆಭರಣಗಳಿಂದ ಅಲಂಕೃತರಾದರು. ಹೊಳೆದ ಅಕ್ಕಿಹಿಟ್ಟಿನ ದೀಪಗಳನ್ನು ತಯಾರಿಸಿದರು. ಆ ದೀಪಗಳನ್ನು ಅರಿಶಿನ ಕುಂಕುಮ ಹೂಗಳಿಂದ ಅಲಂಕರಿಸಿದರು. ತುಂಬ ತುಪ್ಪವನ್ನು ಹಾಕಿ ಬೆಳಗಿಸಿದರು, ಮಂಗಳ ವಾದ್ಯಗಳೂ, ತಮಟೆ, ಡೋಲುಗಳ ವಾದ್ಯಗಳೂ ಮೊಳಗುತ್ತಿರಲು, ನಾರೀಮಣಿಯರು ನೂಪುರ, ಕಂಕಣಗಳ ಕಿಂಕಿಣಿಗಳ ಝಂಕೃತಿಯನ್ನು ಮಾಡುತ್ತಾ, ಗೀತಗಳನ್ನೂ ಹಾಡುತ್ತಾ ಸ್ವಾಮಿಗೆ ದೀಪೋತ್ಸವವನ್ನು ಮಾಡಲು, ಕೂರ್ಮಗಿರಿಗೆ ಪ್ರಯಾಣ ಮಾಡಿದರು. ಎರ್ರಪ್ಪರೆಡ್ಡಿ ತನ್ನ ಮಿತ್ರ ವೃಂದದೊಡನೆಯು, ಹಿಟ್ಟಿನ ದೀಪಗಳನ್ನು ತಲೆಯಮೇಲೆ ಹೊತ್ತಿರುವ ಗ್ರಾಮದ ಸತೀಮಣಿಯರೊಡನೆಯೂ "ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿ ಪಾದಗಳಿಗೆ ಗೋವಿಂದಾ" ಗೋವಿಂದಾ ಎಂದು ಉಚ್ಚಸ್ವರದಲ್ಲಿ ಭಕ್ತಿಯಿಂದ ಹೇಳುತ್ತಾ ಬೆಟ್ಟವನ್ನು ಏರಲು ತೊಡಗಿದನು. ಸಾಲುಸಾಲಾಗಿ ಹತ್ತುತ್ತಾ ನಡೆಯುತ್ತಿರುವಾಗ, ಆ ಸ್ತ್ರೀಯರ ತಲೆಯ ಮೇಲಿರುವ ದೀಪಗಳು ಬೆಟ್ಟದ ದಾರಿಯಲ್ಲಿ ಕಟ್ಟಿರುವ ಮಾಣಿಕ್ಯ ತೋರಣದಂತೆ ಮಿರುಗುತ್ತಿತ್ತು. ಎರ್ರಪ್ಪರೆಡ್ಡಿಯು ಈ ವಿಧವಾಗಿ ತನ್ನ ಹರಕೆಯನ್ನು ಸಲ್ಲಿಸಿದನು. ಸ್ವಾಮಿಯನ್ನೇ ತನ್ನ ಗೃಹ ದೇವತೆಯನ್ನಾಗಿ ಅಂಗೀಕರಿಸಿದನು. ತನ್ನ ಪುತ್ರನಿಗೂ, ಸ್ವಾಮಿಯ ಹೆಸರನ್ನೆ "ಆದಿನಾರಾಯಣ್ಣಾ" ಎಂದು ನಾಮಕರಣಮಾಡಿದನು. ಹೀಗೆ ಎರ್ರಪ್ಪರೆಡ್ಡಿಯು ಪ್ರತಿವರ್ಷವೂ ಬಹುವೈಭವದಿಂದ ದೀಪೋತ್ಸವವನ್ನು ನಡೆಸುತ್ತಾ, ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ಭಕ್ತನಾಗಿ ರಾರಾಜಿಸಿದನು.

ಸ್ವಲ್ಪ ದಿನಗಳ ತರುವಾಯ ಎಲವಲೋಡು ಗ್ರಾಮಸ್ಥರು ತಮ್ಮ ವಾಸಸ್ಥಾನವನ್ನು ಬಿಟ್ಟು, ಅಲ್ಲಿಗೆ ಸಮೀಪದಲ್ಲಿಯೇ ದಕ್ಷಿಣಕ್ಕೆ "ಎಲ್ಲೋಡು" ಎಂಬ ಗ್ರಾಮವನ್ನು ನಿರ್ಮಿಸಿಕೊಂಡು, ಧನಕನಕ ವಸ್ತುವಾಹನಾದಿಗಳೊಡನೆ ಸುಖವಾಗಿ ಸ್ವಾಮಿಯ

ಅವರು ಸ್ಥಾಪಿಸಿದ ಆ ಗ್ರಾಮವು ಈಗಲೂ, "ಎಲ್ಲೋಡು" ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಎರ್ರಪ್ಪರೆಡ್ಡಿಯು ಮೊದಲು ನಿರ್ಮಿಸಿದ ಎಲವಲೋಡು– ಎಂಬ ಹಳ್ಳಿಯ ಪಾಳುಬಿದ್ದ ಅವಶೇಷಗಳೂ ಗೋಚರವಾಗುತ್ತಿವೆ.

ಈ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯು ಶಿಲಾಮೂರ್ತಿಯರೂಪದಲ್ಲಿ ಕೂರ್ಮಗಿರಿಯಲ್ಲಿ ಉದ್ಭವಿಸಿ, ಭಕ್ತಾದಿಗಳನ್ನು ಅನುಗ್ರಹಿಸುತ್ತಿರುವ ವಿಷಯ, ಎಲ್ಲೆಡೆಯಲ್ಲೂ ಹರಡಿತು. ದೂರದೂರದಿಂದಲೂ, ಭಕ್ತರನೇಕರು ಬಂದು ಸ್ವಾಮಿಯನ್ನು ಸಂದರ್ಶಿಸಿ, ಮನಃಕಾಮನೆಗಳನ್ನು ಪಡೆದು ಆನಂದಿಸಿದರು. ಕುಂಟರು, ಕುರುಡರು, ಬಡವರು, ಸಂತತಿಕಾಮಿಗಳು, ಅವಿವಾಹಿತ ಕನ್ಯೆಯರು, ಯುವಕರು, ಭೂತ–ಪ್ರೇತ–ಪಿಶಾಚಿಗಳ ಬಾಧಾ ಪೀಡಿತರೂ, ರೋಗಿಗಳೂ–ಮೊದಲಾಗಿ ವಿವಿಧ ಆರ್ತರು, ಆರೋಗ್ಯವಂತರೂ, ಶ್ರೀಮಂತರೂ, ಆಗಿ, ಮನೋಭೀಷ್ಟಗಳನ್ನು ಪಡೆದವರು, ಅಸಂಖ್ಯಾತರಾದರು. ಸುಂದರಶರ್ಮ, ಬಂದ ಭಕ್ತರಿಗೆ ಕೂರ್ಮಗಿರಿ ವೃತ್ತಾಂತವನ್ನೂ, ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಲೀಲಾ–ವೈಭವ–ಅನುಗ್ರಹ–ವಿಶೇಷಗಳನ್ನೂ ತಿಳಿಸುತ್ತಾ ಭಗವತ್ಸೇವಾ ಸಕ್ತನಾಗಿ, ಭಕ್ತರ ಆದರಕ್ಕೆ ಪಾತ್ರನಾಗಿ ಎಲ್ಲೋಡು ಗ್ರಾಮಸ್ಥರಿಂದ ಪೂಜಿತನಾಗಿ, ಸ್ವಾಮಿಯನ್ನು ಆರಾಧಿಸುತ್ತಾ ಧರ್ಮಪತ್ನಿ ಜ್ಞಾನಾಂಬ ಸಹಿತ ಸುಖವಾಗಿ ಜೀವನ ನಡೆಸುಕೊಳ್ಳುತ್ತಿದ್ದನು.

8

ಮೈಸೂರು ರಾಜ್ಯವು ಟಿಪ್ಪುಸುಲ್ತಾನನ ಅಧೀನವಾಗುವುದಕ್ಕೆ ಮೊದಲು, ಪಾಳೇಗಾರರು ಸ್ವಲ್ಪ ಸ್ವಲ್ಪ ಭಾಗವನ್ನು ತಮ್ಮದನ್ನಾಗಿ ಮಾಡಿಕೊಂಡು ಆಳುತ್ತಾ ಪ್ರಸಿದ್ಧರಾಗಿದ್ದರು. ಆ ಪಾಳೇಗಾರರಲ್ಲಿ ದೊಡ್ಡ ಬೈರೇಗೌಡ, ಚಿಕ್ಕ ಬೈರೇಗೌಡರೆಂಬ ಸಹೋದರರು ಪ್ರಸಿದ್ಧರಾಗಿದ್ದರು. ದೊಡ್ಡ ಬೈರೇಗೌಡನು ದೊಡ್ಡ ಬಳ್ಳಾಪುರ ಭಾಗವನ್ನೂ, ಚಿಕ್ಕಬೈರೇಗೌಡನು ಚಿಕ್ಕಬಳ್ಳಾಪುರ ಪ್ರಾಂತ್ಯವನ್ನೂ ಆಳುತ್ತಿದ್ದರು. ಚಿಕ್ಕಬೈರೇಗೌಡನಿಗೆ ರಣಬೈರೇಗೌಡನೆಂಬ ಬಿರುದೂ ಇತ್ತು. ಆತನು ರಣರಂಗದಲ್ಲಿ ಅಸಮಾನ ಪರಾಕ್ರಮವನ್ನು ತೋರಿಸಿ ಜಯಶೀಲನಾಗಿ ಹಿಂದಿರುಗುತ್ತಿದ್ದನು. ಆದ್ದರಿಂದಲೇ ಆತನಿಗೆ ಆ ಬಿರುದು. ಆತನು ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಣುತ್ತಾ ಪ್ರಜಾರಂಜಕನಾಗಿ ಶತ್ರು ಭೀಕರನಾಗಿ ರಾಜ್ಯವಾಳುತ್ತಿದ್ದನು.

ಆಳುತ್ತಿದ್ದರು. ಒಂದು ಸಲ ಅವರಿಗೂ ರಣಬೈರೇಗೌಡನಿಗೂ ಮನಸ್ತಾಪ ಉಂಟಾಯಿತು. ರಣಬೈರೇಗೌಡನು ಹೇಗಾದರೂ ಪೆನುಗೊಂಡ ರಾಜ್ಯವನ್ನು ತನ್ನದನ್ನಾಗಿಮಾಡಿಕೊಳ್ಳಬೇಕೆಂದು ಅನೇಕ ಸಲ ಪ್ರಯತ್ನಮಾಡಿ ವಿಫಲವಾಗಿದ್ದನು.

ಒಂದು ದಿನ ರಣಬೈರೇಗೌಡನು ಇದ್ದಕ್ಕಿದ್ದಂತೆಯೇ ಸೈನಿಕರನ್ನು ಜೊತೆ ಮಾಡಿಕೊಂಡು ಚಿಕ್ಕಬಳ್ಳಾಪುರದಿಂದ ಪೆನುಗೊಂಡದ ಕಡೆಗೆ ಪ್ರಯಾಣ ಮಾಡಿದನು. ಮಾರನೆಯ ದಿನ ಮಧ್ಯಾಹ್ನದ ಸಮಯಕ್ಕೆ ಸೈನ್ಯ ಸಮೇತ ಶ್ರೀಕೂರ್ಮಗಿರಿಯ ಸಮೀಪಕ್ಕೆ ಬಂದನು. ಆ ದಿನ ಭಾನುವಾರವಾದ್ದರಿಂದ ಅರ್ಚಕನು ಪೂಜೆ ಮುಗಿಸಿಕೊಂಡು ಬೆಟ್ಟವಿಳಿದು ಅದೇ ಸಮಯಕ್ಕೆ ಬರುತ್ತಿದ್ದನು. ಸ್ವಾಮಿ ದರ್ಶನಕ್ಕಾಗಿ ಬಂದಿದ್ದ ಸುತ್ತಮುತ್ತಲಿನ ಊರಿನವರು ಬೆಟ್ಟದ ಸಮೀಪದಲ್ಲಿ ಒಲೆಗಳನ್ನು ಹಚ್ಚಿ ಅಡುಗೆಗಳನ್ನು ತಯಾರಿಸಿ ಕೊಳ್ಳುತ್ತಿದ್ದರು. ಈ ಗೊಂದಾರಣ್ಯದಲ್ಲಿ ಇಷ್ಟು ಜನ ಇದ್ದು ಅಡಿಗೆಗಳನ್ನು ತಯಾರಿಸಿಕೊಳ್ಳುತ್ತಿರುವುದರ ಕಾರಣವನ್ನು ಊಹಿಸಿಕೊಳ್ಳಲಾರದೆ, ವಿಸ್ಮಯಾವಿಷ್ಟಚೇತಸ್ಕನಾದನು. ಕುದುರೆಯಿಂದ ಇಳಿಯುವಷ್ಟರಲ್ಲಿ ಅರ್ಚಕನೂ ಅಲ್ಲಿಗೇ ಬಂದನು. ಅರ್ಚಕನಿಗೆ ನಮಸ್ಕಾರ ಮಾಡಿ ರಣಬೈರೇಗೌಡನು "ಸ್ವಾಮಿ, ಇಲ್ಲಿ ಇಷ್ಟೊಂದು ಜನವಿರುವುದಕ್ಕೆ ಕಾರಣವೇನೆಂದು" ಕೇಳಿದನು. ಅರ್ಚಕನು ಕೂರ್ಮಗಿರಿಯ ವಿಶೇಷವನ್ನೂ, ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಲೀಲಾ-ಪ್ರಭಾವಗಳನ್ನೂ ವಿಸ್ತಾರವಾಗಿ ವರ್ಣಿಸಿದನು. ವಿಚಾರವನ್ನು ಕೇಳಿ ರಣಬೈರೇಗೌಡನಿಗೆ ಆಶ್ಚರ್ಯ ಭಕ್ತಿಗಳು ಏಕಕಾಲದಲ್ಲಿ ಅಂಕುರಿಸಿದುವು. "ಸ್ವಾಮಿ ನಾನೊಂದು ಮಹತ್ತರ ಕಾರ್ಯಕ್ಕಾಗಿ ಪೆನುಗೊಂಡೆಗೆ ಹೋಗುತ್ತಿದ್ದೇನೆ. ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಅನುಗ್ರಹದಿಂದ ಸಫಲನಾಗುತ್ತೇನೆಂದು ನಂಬಿಕೆಯಾಗಿದೆ. ಪುನಃ ಹಿಂದಿರುಗಿ ಬಂದು ಪರಿವಾರ ಸಹಿತ ಸ್ವಾಮಿಯನ್ನು ಸಂದರ್ಶಿಸಿ ಕೈಲಾದ ಕೈಂಕರ್ಯವನ್ನು ನಡೆಸುತ್ತೇನೆ" ಎಂದನು. ಅರ್ಚಕನು ಸಂತೋಷದಿಂದ ತೀರ್ಥಪ್ರಸಾದಗಳನ್ನು ಕೊಟ್ಟು "ರಣಬೈರೇಗೌಡರೇ, ಸ್ವಾಮಿಯು ಖಂಡಿತ ಅನುಗ್ರಹ ಮಾಡುತ್ತಾನೆ. ನಿಮ್ಮ ಕಾರ್ಯವು ಕೈಗೊಡುತ್ತದೆ, ಹೋಗಿಬನ್ನಿ" ಎಂದು ಆಶೀರ್ವದಿಸಿ, ಕಳುಹಿಸಿಕೊಟ್ಟನು.

ರಣಬೈರೇಗೌಡನು ಕೂರ್ಮಗಿರೀಂದ್ರನಾದ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನೇ ಸ್ಮರಿಸುತ್ತಾ ಸೇನಾಸಹಿತನಾಗಿ ಪೆನುಗೊಂಡೆಯನ್ನು ಸೇರಿ, ಪರಾಕ್ರಮದಿಂದ ಕಾದಿ, ಸಫಲನಾದನು. ಬಹುದಿನಗಳಿಂದ ನಡೆಯುತ್ತಿದ್ದ

ಹೋರಾಟವು ಕೊನೆಗೊಂಡಿತು. ವಿಜಯಲಕ್ಷ್ಮಿ ಯು ರಣಬೈರೇಗೌಡನನ್ನು ವರಿಸಿದಳು. ಪೆನುಗೊಂಡೆಯು ತನ್ನ ಕೈವಶವಾಯಿತು. ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಕೃಪೆಯನ್ನು ಪುನಃ ಪುನಃ ಕೊಂಡಾಡಿದನು. ಕೂರ್ಮಗಿರೀಂದ್ರನನ್ನು ಶರಣು ಹೊಂದಿದವರಿಗೆ ಅಪಜಯವೆಂಬುದು ಇಲ್ಲವಷ್ಟೇ! ಆತನ ಭಕ್ತರಿಗೆ ಎಲ್ಲವೂ ಸಾಧ್ಯವೇ! ಈ ವಿಜಯ ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯ ಅನುಗ್ರಹದಿಂದಲೇ ಸಾಧ್ಯವಾಯಿತು. ಅನ್ಯಥಾ ಅಲ್ಲ ಎಂದು ಭಾವಿಸಿ, ಪರಿವಾರ ಸಹಿತನಾಗಿ ಬಂದು ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಸಂದರ್ಶಿಸಿದನು. ತೃಣ-ಕಾಷ್ಠ-ಜಲ ಸಮೃದ್ಧವಾಗಿ ರಮ್ಯವಾಗಿ ಒಪ್ಪುವ ಕೂರ್ಮಗಿರಿ ಪ್ರದೇಶವನ್ನೂ ತನ್ನ ಆಳ್ವಿಕೆಗೆ ಸೇರಿಸಿಕೊಳ್ಳಬೇಕೆಂದು ಬಯಸಿದನು. ಅಂದಿನಿಂದಲೇ ಆ ಪ್ರದೇಶವನ್ನೂ ತನ್ನ ವಶವನಾಡಿಕೊಂಡು ರಣಬೈರೇಗೌಡನು ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಅನನ್ಯ ಭಕ್ತನಾದನು.

ಕೆಲವು ದಿನಗಳ ತರುವಾಯ ಒಂದುದಿನ ರಣಬೈರೇಗೌಡನು ತನ್ನ ಪತ್ನೀಪುತ್ರ-ಪರಿವಾರ ಸಹಿತ ಕೂರ್ಮಗಿರಿಗೆ ಬಂದು ಕೂರ್ಮ ಗಿರೀಶನಾದ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಅನನ್ಯಭಕ್ತಿಯಿಂದ ಆರಾಧಿಸಿ, ಬೆಟ್ಟದಿಂದ ಇಳಿದನು. ತನ್ನ ಪರಿವಾರದವರಿಗೆ ಕೇಳಿಸುವಂತೆ, "ನಮ್ಮ ಸ್ವಾಮಿಗೆ ಶಾಶ್ವತ ಸೇವೆಗಳು ನೆರವೇರುವಂತೆ ವಿರ್ಪಡಿಸಬೇಕು"- ಎಂಬ ಸಂಕಲ್ಪ ಮಾಡಿದ್ದೇನೆ. ನನ್ನ ಕುದುರೆಯನ್ನು ಸಂಚಾರ ಮಾಡಲು ಬಿಡುತ್ತೇನೆ, ಅದು ಸುತ್ತಾಡಿ ಬಂದ ಪ್ರಾಂತವನ್ನೆಲ್ಲಾ ಸ್ವಾಮಿಗೆ-ಮಾನ್ಯ ಜಮೀನಾಗಿ ಕೊಡುತ್ತೇನೆ. ಅದರಿಂದ ಬರುವ ಆದಾಯವೆಲ್ಲವನ್ನೂ ಭಗವತ್ ಕೈಂಕರ್ಯಕ್ಕಾಗಿ ವಿನಿಯೋಗಿಸುತ್ತೇನೆ" ಎಂದು ಹೇಳಿ ತನ್ನ ಕುದುರೆಯನ್ನು ಪೂಜಿಸಿ ಸ್ವಾಮಿಯನ್ನು ಪ್ರಾರ್ಥಿಸಿ-ಸಂಚಾರಕ್ಕಾಗಿ ಬಿಟ್ಟನು. ಅದರ ಸಂಚಾರ ಪ್ರಾಂತವನ್ನು ಗುರುತಿಸುವುದಕ್ಕಾಗಿ ಒಬ್ಬ ಸೈನಿಕನನ್ನೂ ಅದರ ಹಿಂದೆ ಕಳುಹಿಸಿದನು. ಆ ಕುದುರೆಯು ಸ್ವಲ್ಪ ಪ್ರದೇಶವನ್ನು ಸುತ್ತಿ ಬಂದು ತನ್ನ ಸ್ಥಾನವನ್ನೂ ಸೇರಿತು. ತಾನು ಅಡಿದ ಮಾತಿನಂತೆ ಕುದುರೆಯುಸುತ್ತಿಬಂದ ಪ್ರದೇಶವನ್ನೆಲ್ಲಾ ಶ್ರೀ ಕೂರ್ಮಗಿರೀಶನ ಹೆಸರಿಗೆ ಮಾನ್ಯವಾಗಿ ಕೊಟ್ಟು ಡಂಗುರ ಹೊಡೆಯಿಸಿದನು.

ಇಂದಿಗೂ ಸಹ ಆ ರಣಬೈರೇಗೌಡನು ಕೊಟ್ಟ ಹೊಲಗದ್ದೆಗಳು ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಹೆಸರಿನಲ್ಲಿ ಮಾನ್ಯಗಳಾಗಿ ಸ್ವಾಮಿಯ

ಕೈಂಕರ್ಯಕ್ಕಾಗಿ ಉಪಯೋಗವಾಗುತ್ತಿವೆ. ರಾಷ್ಟ್ರೀಯಗೌರವದ ಕೇಂದ್ರ ಅಚಂದ್ರಾರ್ಕವಾಗಿ ನಿಂತಿವೆ.

೨

ಜಗತ್ತಿನಲ್ಲಿ ಸತ್ಪುರುಷರು ಅವತರಿಸಿ, ಲೋಕೋದ್ಧಾರಕ್ಕಾಗಿ ಶ್ರಮಿಸುತ್ತಿರುವುದು ಲೋಕ ಪ್ರಸಿದ್ಧ. ಸಮರ್ಥ ರಾಮದಾಸರು, ಚೈತನ್ಯ ಮಹಾಪ್ರಭು, ರಾಮಕೃಷ್ಣ ಪರಮಹಂಸರು, ಬ್ರಹ್ಮಚೈತನ್ಯ ಮಹಾರಾಜರು ಇತ್ಯಾದಿ ಮಹಾಪುರುಷರ ಜೀವನಗಳು ನಮಗೆ ನಿದರ್ಶನಗಳಾಗಿ ಆದರ್ಶವಾಗಿವೆ.

ಸುಮಾರು ನೂರೈವತ್ತು ವರ್ಷಗಳ ಹಿಂದೆ ಕೂರ್ಮಗಿರಿ ಕ್ಷೇತ್ರದಲ್ಲಿ "ಕೃಷ್ಣಾವಧೂತ"ರೆಂಬ ಮಹಾತ್ಮರೊಬ್ಬರಿದ್ದರು. ಅವರಿಗೆ ಆಗಮಾದಿ ಅಷ್ಟ ಸಿದ್ಧಿಗಳೂ ಕರಗತವಾಗಿದ್ದುವು. ಆತನು ಅವಧೂತ ಎಂದೇ ಕಾಲದಲ್ಲಿ ಅನೇಕ ಸ್ಥಳಗಳಲ್ಲಿ ಗೋಚರವಾಗುತ್ತಿದ್ದರು. ಅನೇಕ ಮಹತ್ಕಾರ್ಯಗಳನ್ನು ತೋರಿಸುತ್ತಿದ್ದರು. ದೃಶ್ಯ ದೃಶ್ಯಾ ಪ್ರಭಾವಗಳು ಆತನಲ್ಲಿದ್ದುವು.

ಆತನು ಬಾಲ್ಯದಲ್ಲಿಯೇ ಅನೇಕ ತೀರ್ಥಯಾತ್ರೆಗಳನ್ನು ಮಾಡಿದ್ದರು. ಯಾವ ಒಂದು ಸ್ಥಳದಲ್ಲಿಯೂ ಸ್ಥಿರವಾಗಿರಲಿಲ್ಲ. ಎಲ್ಲಿ ಮನಸ್ಸಿಗೆ ಶಾಂತಿ ದೊರೆಯಲಿಲ್ಲ. ಕಡೆಗೆ, ಈ ಕೂರ್ಮಗಿರಿಗೆ ಬಂದು ಸೇರಿದರು. ಈ ಗಿರಿಯು ಆತನಿಗೆ ಪ್ರಶಾಂತವಾಗಿಯೂ, ತನಗೆ ತಪೋಯೋಗ್ಯ ಭೂಮಿಯಾಗಿಯೂ ತೋರಿತು. ಆತನು ಕಾಷಾಯ ವಸ್ತ್ರಗಳನ್ನು ಧರಿಸಿ ಯೋಗದಂಡ, ಕಮಂಡಲುಗಳನ್ನು ಹಿಡಿದು ಪಾದುಕೆಗಳನ್ನು ಧರಿಸಿ, ಸಂಚಾರ ಮಾಡುತ್ತಿದ್ದರು. ಗುಡಿಬಂಡೆ, ಎಲ್ಲೋಡು ಚೋಳಶಿಬ್ಬನಹಳ್ಳಿ ಅಕ್ಕಪಕ್ಕ ಗ್ರಾಮಗಳಲ್ಲಿ ಬಾಹುವ ಜನರು ಅವರಲ್ಲಿ ಪೂಜ್ಯ ಭಾವವನ್ನು ತಾಳಿ ಗೌರವಿಸುತ್ತಿದ್ದರು.

ಶ್ರೀ ಕೃಷ್ಣಾವಧೂತರು ಶ್ರೀ ಲಕ್ಷ್ಮೀಅದಿನಾರಾಯಣ ಸ್ವಾಮಿಯನ್ನು ಕುರಿತು ಘೋರ ತಪಸ್ಸು ಮಾಡಿದ್ದರು. ಶ್ರೀ ಲಕ್ಷ್ಮೀಅದಿನಾರಾಯಣ ಸ್ವಾಮಿಯು ತನ್ನ ಆರಾಧ್ಯ ಸ್ವರೂಪವನ್ನು ತನ್ನ ಯೋಗದಂಡದ ಮೇಲೆ ಕೆತ್ತಿಸಿ ಮಾಡಿಸಿ, ಅದನ್ನೆ ಈಷ್ಟಿಸುತ್ತಾ ತಲ್ಲೀನರಾಗಿ, ಶ್ರೀಪಥವನ್ನು ಆಚಾರವಾಗಿ ಉಪಯೋಗಿಸಿ, ದೀಕ್ಷೆಯಿಂದ ಯೋಗದಲ್ಲಿ ಬಹುಕಾಲ ಕುಳಿತರು. ಅನಂತ ಕಾಲದಲ್ಲಿಯೇ, ತನ್ನಿಗೆ ಪ್ರಸನ್ನರಾಗಿ, ಶ್ರೀ ಲಕ್ಷ್ಮೀಅದಿನಾರಾಯಣ ಸ್ವಾಮಿಯು ಪ್ರತ್ಯಕ್ಷರಾಗಿ, ವರವನ್ನು ಬೇಡಲು, ಹೇಳಲು, ಸ್ವಾಮಿಯನ್ನು ಸ್ತೋತ್ರಮಾಡಿ "ಸ್ವಾಮಿ ನಿನ್ನ ಪಾದ

ಪಮೋದಗಳನ್ನು ಸೇವಿಸುವ ಭಾಗ್ಯವು ನನಗೆ ಲಭಿಸುವಂತೆ ಕರುಣಿಸು" ಎಂದರ
"ತಥಾಸ್ತು" ಎನ್ನುತ್ತಾ ಭಗವಂತನು ಅದೃಶ್ಯನಾದನು. ಕೃಷ್ಣಾವಧೂತರ
ನೋಡುತ್ತಿರುವಂತೆಯೇ ಸ್ವಾಮಿಯು ಸಾಕ್ಷಾತ್ಕರಿಸಿದ ಸ್ಥಳದಲ್ಲಿ ಶ್ರೀದೇವಿ-
ಭೂದೇವಿಗಳೊಡನೆ ರಾರಾಜಿಸುವ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಶಾಶ್ವ
ವಿಗ್ರಹಗಳು ಗೋಚರಿಸಿದವು. ಕೃಷ್ಣಾವಧೂತರು ಮಹಾಸಂತೋಷದೊಡನೆ ಆ
ವಿಗ್ರಹಗಳನ್ನು ಸಮಸ್ಕರಿಸಿ, ಎತ್ತಿ ಎದೆಗೆ ಅಪ್ಪಿಕೊಂಡು, ಆ ವಿಗ್ರಹಗಳನ್ನು ತೆಗೆದುಕೊಂಡ
ಹೋಗಿ ಗುಹಾಂತರ್ಗತ ಶ್ರೀ ಲಕ್ಷ್ಮೀಆದಿನಾರಾಯಣಸ್ವಾಮಿಯ ಉದ್ಭವ
ಶಿಲಾಮೂರ್ತಿಯ ಮುಂದೆ ಇಟ್ಟು ಅಂದಿನಿಂದಲೇ ಅವುಗಳನ್ನು ಆರಾಧಿಸುತ್ತಾ
ಸ್ವೇಚ್ಛೆಯಾಗಿ, ಆ ಪರಿಸರ ಪ್ರದೇಶಗಳಲ್ಲಿ ಸಂಚಾರಮಾಡುತ್ತಾ ಇದ್ದರು.

ಸಂಪತ್ತನ್ನು ಆರ್ಜಿಸುವುದು ಒಂದು ದೊಡ್ಡತನವೆಂದಾದರೆ, ಅದನ್ನೂ
ಸರಿಯಾದರೀತಿಯಲ್ಲಿ ಸದ್ವಿನಿಯೋಗ ಮಾಡುವುದು ಅದಕ್ಕಿಂತಲೂ ಹೆಚ್ಚು
ದೊಡ್ಡತನ. ಪುಣ್ಯವನ್ನಾಗಲಿ, ಪಾಪವನ್ನಾಗಲಿ. ದೊಡ್ಡತನವನ್ನಾಗಲಿ.
ಸಣ್ಣತನವನ್ನಾಗಲಿ, ಒಳ್ಳೆಯದನ್ನಾಗಲಿ, ಕೆಟ್ಟದ್ದನ್ನಾಗಲಿ, ಕೀರ್ತಿಯನ್ನಾಗಲಿ,
ಅಪಕೀರ್ತಿಯನ್ನಾಗಲಿ, ಹೊಂದಲು, ಹಣವೇ ಮುಖ್ಯವಾದ ಸಾಧನಗಳಲ್ಲಿ
ಒಂದು. ಸಂಪತ್ತನ್ನು ಹೊಂದಿಯೂ, ಗರ್ವಕ್ಕೊಳಗಾಗದೆ, ಭಗವದ್ಭಕ್ತನಾಗಿ
ಧರ್ಮ ಪರನಾಗಿ ಸಂಪತ್ತನ್ನು ಸನ್ಮಾರ್ಗದಲ್ಲಿ ವಿನಿಯೋಗಿಸುತ್ತಾ ಜೀವನ ಸಾರ್ಥಕ
ಗೊಳಿಸಿಕೊಳ್ಳುವವರಲ್ಲಿ ದಾಸಾನರಸಯ್ಯ ಶ್ರೇಷ್ಠಿ ಎಂಬುವವರೂ ಒಬ್ಬರು.

ಆದಿನಾರಾಯಣಸ್ವಾಮಿ ಬೆಟ್ಟವೆಂಬ– ಇತರ ನಾಮಧೇಯವಿರುವ ನಮ್ಮ
ಕೂರ್ಮಗಿರಿಗೆ ಸಂಪೂರ್ಣ ಪಶ್ಚಿಮಕ್ಕೆ ಎಂಟು ಮೈಲಿ ದೂರದಲ್ಲಿ ಕಂಚಿ
ಸಮುದ್ರವೆಂಬ ಗ್ರಾಮವಿದೆ. ಪ್ರಕೃತ ಆಂಧ್ರಪ್ರದೇಶವಾದ ಹಿಂದೂಪುರ ತಾಲ್ಲೂಕಿಗೆ
ಸೇರಿದ ಗ್ರಾಮ. ಸುಮಾರು ಒಂದುನೂರು ವರ್ಷಗಳ ಮೊದಲು. ಆ ಗ್ರಾಮದಲ್ಲಿ
ದಾಸಾವಂಶ ಕುಲತಿಲಕನಾಗಿ ಪ್ರಸಿದ್ಧನಾದ, ನರಸಯ್ಯ ಶ್ರೇಷ್ಠಿ ಎಂಬ
ಆರ್ಯವೈಶ್ಯರೊಬ್ಬರಿದ್ದರು. ಆತನಿಗೆ, ನಾರಾಯಣಪ್ಪ, ಆದಿಗೋವಿಂದಯ್ಯ,
ರಂಗಯ್ಯ, ಆದಿಮೂರ್ತಯ್ಯ ಮತ್ತು ಅಣ್ಣಯ್ಯ ಎಂಬ ಐದು ಜನ ಮಕ್ಕಳಿದ್ದರು.
ಅವರ ಮನೆದೇವರು ಕೂರ್ಮಗಿರೀಂದ್ರನಾದ ಶ್ರೀ ಲಕ್ಷ್ಮೀಆದಿವಾರಾಯಣ

ಸ್ವಾಮಿಗೆ ಬಂದು ಅರ್ಚನೆಮಾಡಿಸಿ, ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದರು. ಆಗ, ಸ್ವಾಮಿಯು ತನ್ನ ಬಲ ಭಾಗದಿಂದ ಪುಷ್ಪಗಳನ್ನೂ ಪ್ರಸಾದ ರೂಪದಲ್ಲಿ ಕರುಣಿಸಿದರೆ, ಕಾರ್ಯವು ಸಫಲವಾಗುತ್ತದೆಂದೂ, ಎಡಭಾಗದಿಂದ ಪುಷ್ಪಗಳೇ, ಸ್ವಾಮಿಯ ಶಿರೋಭಾಗದಿಂದ ಬೀಳದಿದ್ದರೆ ಕಾರ್ಯವು ಫಲಿಸುವುದು ನಿಧಾನವೆಂದೂ, ನರಸಯ್ಯ ನಂಬಿದ್ದರು.

ನರಸಯ್ಯ ಶ್ರೇಷ್ಠಿಯು, ಬಂದು ಎಲ್ಲ ಸಮಯಗಳಲ್ಲಿಯೂ ಸ್ವಾಮಿಯು ಪುಷ್ಪಗಳನ್ನು ಕರುಣಿಸುವುದರ ಮೂಲಕ ಫಲಾ-ಫಲಗಳನ್ನು ಆತನಿಗೆ ತಿಳಿಯುವಂತೆ ಮಾಡುತ್ತಿದ್ದನು.

ಈಗಲೂ ಸಹ, ಅದೇ ಪದ್ಧತಿಯಂತೆ ಕಾರ್ಯಾರ್ಥಿಗಳಾಗಿ ಬರುವ ಭಕ್ತರು ದೇವರನ್ನು ಹೂವು ಕೇಳುತ್ತಿರುತ್ತಾರೆ. ನಿದರ್ಶನವಾಗಿ, ದೇವರ ಉದ್ಭವ ಶಿಲಾಮೂರ್ತಿಯ ಶಿರೋಭಾಗದಿಂದ ಹೂವು ಬೀಳುವುದೂ ಸಹ ಪ್ರತ್ಯಕ್ಷವಾಗಿ ಗೋಚರವಾಗುತ್ತಲೇ ಇದೆ. ಅದರಂತೆ ಫಲಾ ಫಲಗಳನ್ನೂ ಪಡೆಯುತ್ತಿದ್ದಾರೆ.

ದಾಸಾ ನರಸಿಂಹಯ್ಯ ಶ್ರೇಷ್ಠಿಯು ಒಂದು ಭಾನುವಾರ ತನ್ನ ಪತ್ನೀ ಪುತ್ರರೊಡನೆ ಕೂರ್ಮಗಿರಿಗೆ ಬಂದು ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಗೆ ಅಭಿಷೇಕ ಪುಷ್ಪಾರ್ಚನೆ-ನೈವೇದ್ಯ -ಆರತಿಗಳನ್ನು ಮಾಡಿಸಿ, ನಮಸ್ಕಾರ ಮಾಡಿ, ತೀರ್ಥಪ್ರಸಾದಗಳನ್ನೂ ಪಡೆದು, ಬೆಟ್ಟವನ್ನು ಇಳಿದು ಬರುತ್ತಿದ್ದನು. ಸ್ವಲ್ಪ ದೂರದಿಂದ ವೇದಮಂತ್ರಗಳ ಪಠನೆಯ ಧ್ವನಿಯು ಕೇಳಿಸಿತು. ಈ ಧ್ವನಿಯಿಂದ ಆಕೃಷ್ಟನಾಗಿ ನರಸಯ್ಯ ಶ್ರೇಷ್ಠಿಯು, ಧ್ವನಿಯು ಬಂದಕಡೆಗೆ ಮಕ್ಕಳೊಡನೆ ಹೊರಟನು. ಅಲ್ಲಿ ಕೃಷ್ಣಾವಧೂತರು ಪದ್ಮಾಸನದಲ್ಲಿ ಕುಳಿತು, ಶ್ರೀಲಕ್ಷ್ಮೀಆದಿನಾರಾಯಣ ಸ್ವಾಮಿಯು ಅವರಿಗೆ ಕರುಣಿಸಿದ್ದ ತಾಮ್ರದ ವಿಗ್ರಹಗಳನ್ನು ಪೂಜಿಸುತ್ತಿದ್ದರು. ಆತನ ದಿವ್ಯವಾದ ತೇಜಸ್ಸು, ಸ್ಪಷ್ಟ ಮಂತ್ರೋಚ್ಚಾರಣೆಗಳೂ ನರಸಯ್ಯನವರನ್ನು ಅವರ ಮಕ್ಕಳನ್ನೂ ಮುಗ್ಧರನ್ನಾಗಿ, ಮಾಡಿದುವು. ದೈವಯೋಗವು ಸಿದ್ಧಿಸಿತೆಂದು ಭಾವಿಸಿ, ಅವಧೂತರಿಗೆ ನಮಸ್ಕರಿಸಿ ಅಲ್ಲಿಯೇ ಕುಳಿತರು. ಅವಧೂತರೂ ಸಹ, ಪೂಜೆಯನ್ನು ಪೂರ್ಣಗೊಳಿಸಿ, ತಾವು ತೀರ್ಥಪ್ರಾಶನ ಮಾಡಿ, ಪ್ರಸಾದವನ್ನು ಸ್ವೀಕರಿಸಿದ ನಂತರ ನರಸಯ್ಯ ಮತ್ತು ಆತನ ಮಕ್ಕಳಿಗೆ ತೀರ್ಥಪ್ರಸಾದಗಳನ್ನು ಕೊಟ್ಟು ತಾವೂ ಮೌನವಾಗಿ ಕುಳಿತರು.

ಹಾಗೆ ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿ ಒಬ್ಬರ ಮುಖವನ್ನೊಬ್ಬರು

ನೋಡುತ್ತಾ ಇದ್ದು ತರುವಾಯ, ತಪೋಧನರೂ, ತ್ರಿಕಾಲಜ್ಞರೂ ಆದ ಕೃಷ್ಣಾವಧೂತರು ಮಂದಹಾಸದೊಡನೆ ತಾವು ಪೂಜಿಸುತ್ತಿರುವ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ತಾಮ್ರ ವಿಗ್ರಹಗಳ ವಿಷಯವನ್ನು ತಿಳಿಸಿದರು. ಈ ವಿಷಯವನ್ನು ಆಸಕ್ತಿ ಆಶ್ಚರ್ಯಗಳೊಡನೆ ಕೇಳುತ್ತಿದ್ದ ನರಸಯ್ಯ ಶ್ರೇಷ್ಠಿಯನ್ನು ಕುರಿತು "ಅಯ್ಯಾ, ಶ್ರೇಷ್ಠಿಯವರೇ, ನಿಮ್ಮಿಂದ ಶ್ರೀ ಸ್ವಾಮಿಗೆ ಮಹತ್ತರವಾದ ಸೇವೆ ಸಲ್ಲಬೇಕಾಗಿದೆ. ಆ ಸೇವಾಕಾರ್ಯ ನೆರವೇರಿಸುವಾಗ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯೇ ಸಹಾಯಕನಾಗಿರುತ್ತಾನೆ. ಆದ್ದರಿಂದ ನಿಮ್ಮ ಕೀರ್ತಿಯು ಚಿರಸ್ಥಾಯಿಯಾಗಿ ನಿಲ್ಲುವುದು"ಎಂದರು. ಕೃಷ್ಣಾವಧೂತರು ಹೇಳಿದ ಮಾತುಗಳ ಅಂತರಾರ್ಥವು ನರಸಯ್ಯ ಶ್ರೇಷ್ಠಿಗಾಗಲಿ, ಆತನ ಪುತ್ರರಿಗಾಗಲಿ ಅವಗಾಹನೆಗೆ ಬರಲಿಲ್ಲ. ನರಸಯ್ಯ ಶ್ರೇಷ್ಠಿಯು "ಸ್ವಾಮೀ, ನನಗೆ ತಾವು ಹೇಳಿದ ವಿಷಯವು ಅರ್ಥವಾಗಲಿಲ್ಲ. ಎಲ್ಲವೂ, ಶ್ರೀ ಆದಿನಾರಾಯಣ ಸ್ವಾಮಿಯ ಕೃಪೆ. ನನ್ನಿಂದ ಸಾಧ್ಯವಾಗುವ ಎಲ್ಲ ಸೇವೆಯೂ ಸ್ವಾಮಿಯೇ ನಡೆಸಿಕೊಳ್ಳಲಿ. ಎಲ್ಲಕ್ಕೂ ತಮ್ಮ ಕೃಪೆ ಇರಬೇಕು." ಎಂದು ಹೇಳಿ ಅವಧೂತರ ಆಜ್ಞೆ ಪಡೆದು ಸ್ವಗ್ರಾಮವಾದ ಕಂಚಿ ಸಮುದ್ರಕ್ಕೆ ತನ್ನ ಪುತ್ರರೊಡನೆ ಹೊರಟು ಹೋದರು.

ಒಂದು ದಿನ ದಾಸಾ ನರಸಯ್ಯ ತನ್ನ ಪುತ್ರರೈವರನ್ನೂ ಹತ್ತಿರ ಕರೆದು ಕುಳಿತುಕೊಳ್ಳಲು ಹೇಳಿ,"ಮಕ್ಕಳಿರಾ, ನಮ್ಮ ಮನೆದೇವರು ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಗೆ, ಒಂದು ಆಲಯವನ್ನು ಕಟ್ಟಿಸಬೇಕೆಂದು ಸಂಕಲ್ಪಿಸಿದ್ದೇನೆ. ನಿಮ್ಮ ಅಭಿಪ್ರಾಯವನ್ನು ತಿಳಿಯ ಬಯಸುತ್ತೇನೆ" ಎಂದರು. ತಂದೆಯು ಸತ್ಕಾರ್ಯ ನಡೆಸುತ್ತೇನೆಂದರೆ ಸತ್ಪುತ್ರರು ಎಂದಾದರೂ ಬೇಡವೆನ್ನುತ್ತಾರೆಯೇ? "ಹಾಗೆಯೇ ಆಗಲಿ" ಎಂದು ಪುತ್ರರು ಉತ್ತರಕೊಟ್ಟರು.

ನರಸಯ್ಯ ತಡಮಾಡದೆ, ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಹೂವು-ಕೇಳಲು ಮಕ್ಕಳನ್ನು ಕರೆದುಕೊಂಡು ಕೂರ್ಮಗಿರಿಗೆ ಪ್ರಯಾಣ ಮಾಡಿ ಗಿರಿಯನ್ನು ಸೇರಿದರು. ಅರ್ಚನೆ ಮಾಡಿಸಿದ ನಂತರ ಸ್ವಾಮಿಯನ್ನು ಹೂ ಕೇಳಿದಾಗ "ನಾನು ಈ ಗುಹೆಯಲ್ಲಿಯೇ ಇರುತ್ತೇನೆ ಎಂದು ಕೂರ್ಮ ಮಹಾಮುನಿಗೆ ಮಾತು ಕೊಟ್ಟಿದ್ದೇನೆ. ನನಗೇಕೆ ಗುಡಿ-ಗೋಪುರಗಳು"- ಎಂದು

"ಸ್ವಾಮಿ ನಾನು ಯಾವ ಅಪರಾಧವನ್ನು ಮಾಡಿದ್ದೇನೆ? ನನ್ನ ಮೇಲೆ ಆಗ್ರಹವೇ? ಏನಿದು ಸತ್ಯಸಂಕಲ್ಪವಲ್ಲವೇ? ನಾನು ಕಟ್ಟಿಸಬೇಕೆಂದಿರುವ ಆಲಯದಲ್ಲಿರುವುದು ನಿನಗೆ ಸಮ್ಮತವಿಲ್ಲವೆ? ಹಾಗಾದರೆ ನನ್ನಲ್ಲಿ ಈ ಸಂಕಲ್ಪವನ್ನೇಕೆ ಉತ್ಪನ್ನ ಮಾಡಿದೆ?" ಎಂದು ಬಹುವಾಗಿ ಕಳಕಳಿಯಾದನು. ಮಕ್ಕಳೂ ತಂದೆಯನ್ನು ಬಹು ಸಮಾಧಾನಮಾಡಿ ಮತ್ತೊಂದು ಬಾರಿ ಹೂ-ಕೇಳಿರೆಂದರು. ಆದರೆ, "ಸ್ವಾಮಿಯದು ಒಂದೇ ಅಭಿಪ್ರಾಯ"- ಎಂಬುದು ನರಸಯ್ಯನವರಿಗೆ ಗೊತ್ತಿತ್ತು. ಸ್ವಲ್ಪ ಹೊತ್ತು ಕಳವಳ ಪಡುತ್ತಾ, ನಂತರ ಮಕ್ಕಳೊಡನೆ ಬೆಟ್ಟದಿಂದ ಇಳಿಯ ತೊಡಗಿದನು. ಮಾರ್ಗದಲ್ಲಿ ಕೃಷ್ಣಾವಧೂತರ ಸಂದರ್ಶನವಾಯಿತು.

ಶ್ರೀ ಅವಧೂತರಿಗೆ ನಮಸ್ಕರಿಸಿ ನಡೆದ ವಿಚಾರವೆಲ್ಲವನ್ನೂ ಬಹು ಚಿಂತೆಯಿಂದ ಬಿನ್ನೈಸಿಕೊಂಡನು. ಎಲ್ಲವನ್ನೂ ಸಾವಧಾನವಾಗಿ ಕೇಳಿನಂತರ ನರಸಯ್ಯ ಶ್ರೇಷ್ಠಿಯ ಭುಜವನ್ನು ತಟ್ಟುತ್ತಾ "ವೈಶ್ಯಕುಲ ಶ್ರೇಷ್ಠನೇ ಚಿಂತಿಸಬೇಡ. ಈ ಎಲ್ಲೋಡು ಗ್ರಾಮದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸು. ಅಲ್ಲಿ ಭಗವಂತನ ಪ್ರಸಾದರೂಪವಾದ, ತಾಮ್ರ ವಿಗ್ರಹಗಳನ್ನು ಪೂಜಿಸೋಣ. ಕೂರ್ಮಗಿರಿಯ ಸಮೀಪದಲ್ಲಿ ಒಂದು ಕೆರೆಯನ್ನು ನಿರ್ಮಾಣಮಾಡಿಸು. ಪಶುಗಳಿಗೂ ಪಕ್ಷಿಗಳಿಗೂ, ಮಾನವರಿಗೂ ಸಹ ಕುಡಿಯುವ ನೀರು ದೊರೆಯುವಂತಾಗುತ್ತದೆ. ಈ ಎರಡರಿಂದಲೇ ನಿನ್ನ ಮನೋವಾಂಛೆಯು ಸಿದ್ಧಿಸುತ್ತದೆ. ಆ ಮೂಲಕ ನಿನ್ನ ಯಶಸ್ಸು ಚಿರಕಾಲ ನಿಲ್ಲುತ್ತದೆ-ಎಂದು ಹೇಳಿದರು. ನರಸಯ್ಯ ಶ್ರೇಷ್ಠಿಯು ಅದನ್ನೇ ದೈವಾಜ್ಞೆಯನ್ನಾಗಿ ಭಾವಿಸಿ, ಎಲ್ಲೋಡು ಗ್ರಾಮೀಣರ ಸಹಾಯದಿಂದ ದೇವಾಲಯ ಮತ್ತು ಕಟಾಕನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದನು.

ಕೆಲವೇ ತಿಂಗಳಲ್ಲಿ ದೇವರಮಂದಿರ ಮತ್ತು ಕರೆಗಳ ನಿರ್ಮಾಣವು ಪೂರ್ತಿಯಾಯಿತು. ಕೃಷ್ಣಾವಧೂತರು ಪೂಜಿಸುತ್ತಿದ್ದ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ತಾಮ್ರ ವಿಗ್ರಹಗಳನ್ನು ಎಲ್ಲೋಡು ಗ್ರಾಮದಲ್ಲಿ ಶ್ರೀದಾಸಾನರಸಯ್ಯ ಶ್ರೇಷ್ಠಿ ಕಟ್ಟಿಸಿದ ದೇವಾಲಯದಲ್ಲಿ ಇಟ್ಟು ಪೂಜಿಸಲಾಯಿತು. ಕಟಾಕಾಪ್ರತಿಷ್ಠೆಯು ಶಾಸ್ತ್ರೋಕ್ತ ವಿಧಾನದಿಂದ ನಡೆಯಿತು. ದಾಸಾನರಸಯ್ಯ ಶ್ರೇಷ್ಠಿಯು ಆನಂದತುಂದಿಲನಾದರು. ಗಿರಿಯ ಸಮೀಪದಲ್ಲಿ ಕಟ್ಟಿಸಿದ ಕೆರೆಯನ್ನು ದೇವರ ಕೆರೆ ಎಂದು ಕರೆದರು. ಗ್ರಾಮದಲ್ಲಿ ಕಟ್ಟಿಸಿದ ದೇವಸ್ಥಾನವು ಶ್ರೀ [illegible] ಸ್ವಾಮಿ ದೇವಾಲಯವಾಗಿ ಕೃಷ್ಣಾವಧೂತರಿಗೆ ಆಶ್ರಮ

ಸದೃಶವೂ ಆಗಿ ಗ್ರಾಮವು ಪವಿತ್ರವಾಯಿತು.

(ಎಲ್ಲೋಡು ಗ್ರಾಮದಲ್ಲಿ ಶ್ರೀ ದಾಸಾನರಸಯ್ಯ ಶ್ರೇಷ್ಠಿಯವರು ಕಟ್ಟಿಸಿದ ದೇವಾಲಯದಲ್ಲಿ ಶ್ರೀ ಕೃಷ್ಣಾವಧೂತರು ಪೂಜಿಸುತ್ತಿದ್ದ ತಾಮ್ರ ವಿಗ್ರಹಗಳೂ, ಅವರು ಧರಿಸುತ್ತಿದ್ದ ಯೋಗದಂಡ ಮತ್ತು ಪಾದುಕೆಗಳೂ ಚಿತ್ತವೂ ಸಹ ಈಗಲೂ, ಭಕ್ತರ ಕಣ್ಣುಗಳಿಗೆ ಆನಂದವನ್ನಿತ್ತು ಕೃತಾರ್ಥರನ್ನಾಗಿ ಮಾಡುತ್ತಿವೆ)

11

ದಿನಗಳು ಕಳೆದಂತೆಲ್ಲಾ ಕ್ರಮಕ್ರಮವಾಗಿ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಮಹತ್ವವು ದಿಕ್ಕು ದಿಕ್ಕಿಗೂ ಹರಡಿತು. ಈ ಕೂರ್ಮಗಿರಿಕ್ಷೇತ್ರವನ್ನು ದೇವಾದಾಯ, ಧರ್ಮಾದಾಯ ವಿಭಾಗಕ್ಕೆ ಆಗಿನ ಸರಕಾರವು ಸೇರಿಸಿಕೊಂಡಿತು.

ಇದೇ ಕಾಲದಲ್ಲಿ, ಹಿಂದೂಪುರ ತಾಲ್ಲೂಕಿಗೆ ಸೇರಿದ ಕಂಚಿ ಸಮುದ್ರ ಗ್ರಾಮದಲ್ಲಿ, ದಾಸಾನರಸಯ್ಯ ಶ್ರೇಷ್ಠಿಯ ಪುತ್ರ ಆದಿಗೋವಿಂದಯ್ಯನ ಧರ್ಮಪತ್ನಿಯ ಗರ್ಭಾಂಬುದಿಯಲ್ಲಿ ಕ್ರಿ.ಶ. 1878ರಲ್ಲಿ ಶ್ರೀ ದಾಸಾಲಕ್ಷ್ಮಯ್ಯ ಶ್ರೇಷ್ಠಿಯವರು ಜನ್ಮ ತಾಳಿದರು. ಶ್ರೀಯುತರು ಜನ್ಮದಿಂದಲೇ ದೈವಭಕ್ತರು ಬಾಲ್ಯದಿಂದಲೂ ತಮ್ಮ ಮನೆದೇವರನ್ನು ಭಕ್ತಿಯಿಂದ ಆರಾಧಿಸುತ್ತಿದ್ದರು. ವಂಶಾನುಕ್ರಮವಾಗಿ ಆರಾಧ್ಯ ದೈವವಾದ ಶ್ರೀ ಲಕ್ಷ್ಮೀ ಆದಿನಾರಾಯಣ ಸ್ವಾಮಿಯನ್ನು ಕೂರ್ಮಗಿರಿಗೆ ಬಂದು ನಾನಾ ವಿಧವಾಗಿ ಸೇವಿಸುತ್ತಾ ಕೂರ್ಮಗಿರಿ ಕ್ಷೇತ್ರದಲ್ಲಿ ಭವ್ಯವಾದ ವಿಶಾಲವಾದ ಧರ್ಮಶಾಲೆಯೊಂದನ್ನು ಭಕ್ತರ ಸಹಾಯದಿಂದ ಕಟ್ಟಿಸಿದರು. ಭಕ್ತರ ಅನುಕೂಲಕ್ಕಾಗಿ ಎಲ್ಲೋಡು ಗ್ರಾಮದಲ್ಲಿಯೂ ಸಹ ಒಂದು ಧರ್ಮಶಾಲೆಯನ್ನು ಕಟ್ಟಿಸಿದರು.

ಆ ದಿನಗಳಲ್ಲಿ ಗುಡಿಬಂಡೆ ತಾಲ್ಲೂಕಿನಲ್ಲಿ ಶ್ರೀ ಮಂಕಾಲ ಅಹೋಬಲ ಶಾಸ್ತ್ರಿಗಳೆಂಬುವರು ತಹಸೀಲ್‌ದಾರರಾಗಿದ್ದರು. ಶ್ರೀಯುತರು ತಮ್ಮ ತಾಲ್ಲೂಕಿಗೇ ಸೇರಿದ್ದ ಈ ಎಲ್ಲೋಡು ಗ್ರಾಮವನ್ನು ನಿರೀಕ್ಷಿಸಲು ಬಂದರು. ಅವರು ಬಂದ ದಿನ ಮಾಘಮಾಸದ ಭಾನುವಾರವಾಗಿದ್ದುದು ಒಂದು ವಿಶೇಷ. ಆ ವೇಳೆಗೆ ಬೆಟ್ಟದಲ್ಲಿ ರಥೋತ್ಸವಾದಿಗಳು ನಡೆಯುತ್ತಿರಲಿಲ್ಲ. ಊರಲ್ಲಿರುವ ದೇವಸ್ಥಾನದಿಂದ ಶ್ರೀ ಲಕ್ಷ್ಮೀ ಆದಿನಾರಾಯಣ ಸ್ವಾಮಿಯ ತಾಮ್ರ ವಿಗ್ರಹಗಳನ್ನು ಮಾಘಮಾಸದ ಪ್ರತಿ ಭಾನುವಾರವೂ ಬೆಟ್ಟದ ಮೇಲಕ್ಕೆ ಮಂಗಳವಾದ್ಯ ವೇದ ಪಾರಾಯಣ ಶಾಂತಿಮಂತ್ರಪಾಠಗಳ ಸಹಿತ ಪಲ್ಲಕ್ಕಿಯಲ್ಲಿ ಕೆಗೆದುಕೊಂಡು ಹೋಗಿ, ಉದ್ಭವಶಿಲಾ

ಮೂರ್ತಿಯ ಮುಂದೆ ಸ್ಥಾಪಿಸಿ ಅರ್ಚನಾದಿಗಳಿಂದ ಸೇವೆಮಾಡಿ ಪುನಃ ಊರಿನ ದೇವಾಲಯಕ್ಕೆ ಮಂಗಳವಾದ್ಯ, ವೇದಘೋಷ. ಶಾಂತಿ ಮಂತ್ರಪಠನಗಳ ಸಹಿತ ತಂದು ಯಥಾಸ್ಥಾನದಲ್ಲಿ ಇಡುವ ಪದ್ಧತಿ ಇತ್ತು. ಆ ದಿನಗಳಲ್ಲಿ ರಾತ್ರಿಯ ಸಮಯದಲ್ಲಿ ಬೆಟ್ಟದ ಮೇಲೆ ದೇವರ ಸನ್ನಿಧಿಯಲ್ಲಾಗಲಿ, ಬೆಟ್ಟದ ತಪ್ಪಲಲ್ಲಿರುವ ಧರ್ಮಶಾಲೆಗಳಲ್ಲಾಗಲಿ ಯಾರೂ ಇರುತ್ತಿರಲಿಲ್ಲ. (ಈಗಲೂ ಸಹ ಬೆಟ್ಟದ ಮೇಲೆ ದೇವರ ಸನ್ನಿಧಿಯಲ್ಲಿ ರಾತ್ರಿವೇಳೆ ಇರಲು, ಯಾರಿಗೂ ಧೈರ್ಯವಿಲ್ಲ. ಇಲ್ಲಿಯ ದೇವರು ಶಾಂತಿ ಪ್ರಿಯರು, ಏಕಾಂತ ಪ್ರಿಯರೆಂದು ಪ್ರತೀತಿ). ಈ ಸಲ, ಶ್ರೀಯುತ ತಹಸೀಲದಾರರಾದ, ಶ್ರೀ ಅಹೋಬಲ ಶಾಸ್ತ್ರಿಗಳೂ ಸಹ ವಿಗ್ರಹಗಳನ್ನು ತೆಗೆದುಕೊಂಡು ಹೋಗುವಾಗ, ಭಕ್ತ ಜನವೃಂದದೊಡನೆ ಬೆಟ್ಟದ ಮೇಲಕ್ಕೆ ಹೊರಟರು. ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯ ಸಂದರ್ಶನ ಪಡೆದು ಅರ್ಚನಾದಿಗಳನ್ನು ನಡೆಸಿ, ತೀರ್ಥಪ್ರಸಾದಗಳನ್ನು ವಿನಯದಿಂದ ಸ್ವೀಕರಿಸಿ, ಭಕ್ತಿಯಲ್ಲಿ ತಲ್ಲೀನರಾಗಿ ಆನಂದ ಪರವಶರಾದರು. ಶ್ರೀ ಸ್ವಾಮಿಗೆ ಪ್ರತಿವರ್ಷ ರಥೋತ್ಸವ ಸೇವೆಯೂ ನಡೆಸಬೇಕೆಂದೂ ಅದರಿಂದ ಶ್ರೀ ಸ್ವಾಮಿಯ ಅನುಗ್ರಹವುಂಟಾಗಿ ದೇಶಕ್ಕೆ ಸುಭಿಕ್ಷವೂ, ನಿರುಪದ್ರವವೂ ಒದಗಿ ಪ್ರಜೆಗಳು ಸುಖವಾಗಿರುವವರೆಂದೂ ತೋರಿತು. ಸೃಷ್ಟಿಕರ್ತನೇ ಬಯಸಿದರೆ ಆಯುಸ್ಸಿಗೇನು ಕೊರತೆ.

ತಕ್ಷಣವೇ ಶ್ರೀ ದಾಸಾಲಕ್ಷ್ಮಯ್ಯ ಶ್ರೇಷ್ಠಿಯವರೂ ತಹಸೀಲಾದಾರರಾದ ಶ್ರೀ ಅಹೋಬಲ ಶಾಸ್ತ್ರಿಗಳೂ ಚೆನ್ನಾಗಿ ಪರ್ಯಾಲೋಚಿಸಿ, ಮಾರನೆಯ ವರ್ಷದಿಂದಲೇ ಮಾಘಮಾಸದ ಮೂರನೆಯ ಭಾನುವಾರದಂದು ಶ್ರೀ ಸ್ವಾಮಿಗೆ ರಥೋತ್ಸವವನ್ನು ವೈಭವವಾಗಿಯೂ, ಆಗಮೋಕ್ತವಾಗಿಯೂ ನಡೆಯುವಂತೆ ಏರ್ಪಡಿಸಿದರು.

ಅಂದು ಅವರು ಏರ್ಪಡಿಸಿದ ರಥೋತ್ಸವವು ಇಂದಿಗೂ ಪ್ರತಿವರ್ಷವೂ ವೈಭವದಿಂದಲೂ ವಿಜೃಂಭಣೆಯಿಂದಲೂ ನಡೆಯುತ್ತಿದೆ.

12

ಕೂರ್ಮಗಿರಿ ವಾಸನಾದ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯು ಲೋಕೈಕ ಸುಂದರನೂ, ಅತ್ಯಂತ ಮಹಿಮಾನ್ವಿತನೂ, ಅತ್ಯಂತ ವೈಭವೋಪೇತನೂ,

ಜಗದ್ವಿಖ್ಯಾತನೂ ಆಗಿ ಆಸ್ತಿಕ ಭಕ್ತರನ್ನು ಅನುಗ್ರಹ ಮಾಡುತ್ತಿದ್ದಾರೆ. ಚತುರ್ದಿಶೆಗಳಿಂದಲೂ ಭಕ್ತರು ಇಲ್ಲಿಗೆ ದಿನಂಪ್ರತಿ ಆಗಮಿಸಿ, ಸ್ವಾಮಿಯ ಪ್ರಸನ್ನತೆಯನ್ನು ಪಡೆದು ತಮ್ಮ ಮನಃ ಕಾಮನೆಗಳನ್ನು ಪಡೆಯುತ್ತಿದ್ದಾರೆ. ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಕೆಲವರು ತಮ್ಮ ಇಷ್ಟದೇವರನ್ನಾಗಿಯು, ಕೆಲವರು ತಮ್ಮಗೃಹ ದೇವರನ್ನಾಗಿಯೂ ಭಾವಿಸುತ್ತಿದ್ದಾರೆ.

ಪ್ರತಿವರ್ಷವೂ ಮಾಘಮಾಸದ ಎರಡನೆಯ ಭಾನುವಾರದಿಂದಲೇ ರಥೋತ್ಸವ ಕಾರ್ಯಕ್ರಮಗಳು ಪ್ರಾರಂಭವಾಗಿ, ಮೂರನೆಯ ಭಾನುವಾರ ಬ್ರಹ್ಮರಥೋತ್ಸವವೂ ಬಹು ವೈಭವವಾಗಿ ನಡೆಯುವಂತೆ ಏರ್ಪಡಿಸಲಾಗಿದೆ. ಭಕ್ತರ ಸೌಕರ್ಯಕ್ಕಾಗಿ, ಧರ್ಮಾತ್ಮರಾದ ಆರ್ಯವೈಶ್ಯ ಸಂಘದವರೂ ಬ್ರಾಹ್ಮಣ ಸಂಘದವರೂ, ದೇವಾಂಗದವರೂ ಮೊದಲಾಗಿ ಅನೇಕ ಧರ್ಮಾತ್ಮರೂ, ದಾನಶೀಲರೂ ಧರ್ಮ ಛತ್ರಗಳನ್ನೂ ಕಟ್ಟಿಸಿ, ಛಾವಿಗಳನ್ನೂ ಕಟ್ಟಿಸಿದ್ದಾರೆ. ಇವರೇ ಅಲ್ಲದೆ ಇನ್ನೂ ಅನೇಕ ಮಹನೀಯರುಗಳು ಕಟ್ಟಿಸಿರುವ ಧರ್ಮಶಾಲೆಗಳಲ್ಲಿ, ಸಿದ್ಧಾರೂಢಮಂದಿರವೂ ಒಂದು.

ಈ ರೀತಿಯಾಗಿ ಕೂರ್ಮಾದ್ರೀಶನು ಭಕ್ತಾನಂದ ಸಂದೋಹನಾಗಿ ಭಕ್ತರ ಕೈಂಕರ್ಯಗಳನ್ನು ಸ್ವೀಕರಿಸುತ್ತಾ ಅವರ ಮನೋರಥಗಳನ್ನು ಪೂರೈಸುತ್ತಾ ಲೋಕಕಲ್ಯಾಣಕ್ಕಾಗಿ ಅವತರಿಸಿ, ದಿವ್ಯ ಲೀಲಾ-ವಿಲಾಸವನ್ನು ಪ್ರಕಟಿಸುತ್ತಾ ವಿರಾಜಿಸುತ್ತಿದ್ದಾನೆ.

ಮಹಾಮಹಿಮಾನ್ವಿತನಾದ ಶ್ರೀ ಲಕ್ಷ್ಮೀಆದಿನಾರಾಯಣ ಸ್ವಾಮಿಯನ್ನು ಸಂದರ್ಶಿಸಿ, ಆರಾಧಿಸಿ, ಉದ್ಧಾರವಾಗಬೇಕೇ ಹೊರತು, ವರ್ಣನೆ ಮಾಡಿ ಹೇಳುವುದು, ಅತಿ ಸಾಹಸವಾಗುವುದು ಪರಮಾತ್ಮನು ಸಕಲರಿಗೂ ಮಂಗಳಗಳನ್ನು ನೀಡಲಿ.

ಓಂ ತತ್ಸತ್

॥ ಶ್ರೀ ॥

ಶ್ರೀ ಕೂರ್ಮಗಿರಿ ಕ್ಷೇತ್ರ ಮಹಾತ್ಮೆ

ಲಕ್ಷ್ಮೀ ಆದಿನಾರಾಯಣಸ್ವಾಮಿ ದಿವ್ಯಚರಿತ್ರ

-ವೇ॥ ಬ್ರ॥ ಶ್ರೀ॥ ಮಂಕಾಲ ಲಕ್ಷ್ಮಿ ನರಸಿಂಹ ಶರ್ಮ

-ವೇ॥ ಬ್ರ॥ ಶ್ರೀ॥ ಮಂಕಾಲ ಆದಿನಾರಾಯಣಶರ್ಮ